# ಔಷಧಗಾರಿಕೆ ಅಧಿನಿಯಮ, 1948

(1948ರ ಅಧಿನಿಯಮ ಸಂಖ್ಯೆ 8)

**[3-9-2001 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 18ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 33ರಿಂದ 52ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

## ಅಧ್ಯಾಯ - I

### ಪ್ರಾಸ್ತಾವಿಕ

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅರ್ಥ ವಿವರಣೆ

## ಅಧ್ಯಾಯ - II

### ಭಾರತದ ಔಷಧಗಾರಿಕೆ ಪರಿಷತ್ತು

3. ಕೇಂದ್ರ ಪರಿಷತ್ತಿನ ಸ್ಥಾಪನೆ ಮತ್ತು ರಚನೆ
4. ಕೇಂದ್ರ ಪರಿಷತ್ತಿನ ನಿಗಮನ
5. ಕೇಂದ್ರ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ
6. ಚುನಾವಣೆಗಳ ವಿಧಾನ
7. ಪದಾವಧಿ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳು
8. ಸಿಬ್ಬಂದಿ, ಪರಿಶ್ರಮ ಧನ ಮತ್ತು ಭತ್ಯಗಳು
9. ಕಾರ್ಯನಿರ್ವಾಹಕ ಸಮಿತಿ
9ಎ. ಇತರ ಸಮಿತಿಗಳು
10. ಶಿಕ್ಷಣ ವಿನಿಯಮಗಳು
11. ರಾಜ್ಯಗಳಿಗೆ ಶಿಕ್ಷಣ ವಿನಿಯಮಗಳನ್ನು ಅನ್ವಯಿಸುವುದು
12. ಅನುಮೋದಿತ ಪಠ್ಯ ಕ್ರಮಗಳು ಮತ್ತು ಪರೀಕ್ಷೆಗಳು
13. ಅನುಮೋದನೆಯನ್ನು ಹಿಂತೆಗೆದುಕೊಳ್ಳುವುದು
14. ಯಾವ ಪ್ರದೇಶಗಳಿಗೆ ಈ ಅಧಿನಿಯಮವು ವ್ಯಾಪ್ತವಾಗುತ್ತದೋ ಆ ಪ್ರದೇಶಗಳ ಹೊರಗಡೆ ಮಂಜೂರು ಮಾಡಿದ ಅರ್ಹತೆಗಳು
15. ಘೋಷಣೆಗಳ ವಿಧಾನ

15ಎ. ಕೇಂದ್ರ ರಿಜಿಸ್ಟರು

15ಬಿ. ಕೇಂದ್ರ ರಿಜಿಸ್ಟರಿನಲ್ಲಿ ನೋಂದಣಿ

16. ಪರಿಶೀಲನೆ

17. ಒದಗಿಸಬೇಕಾದ ಮಾಹಿತಿ

17ಎ. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

18. ವಿನಿಯಮಗಳ ರಚನಾಧಿಕಾರ

## ಅಧ್ಯಾಯ – III

### ರಾಜ್ಯ ಔಷಧಗಾರಿಕೆ ಪರಿಷತ್ತುಗಳು

19. ರಾಜ್ಯ ಪರಿಷತ್ತುಗಳ ಸ್ಥಾಪನೆ ಮತ್ತು ರಚನೆ

20. ಅಂತರರಾಜ್ಯ ಒಪ್ಪಂದಗಳು

21. ಜಂಟಿ ರಾಜ್ಯ ಪರಿಷತ್ತುಗಳ ರಚನೆ

22. ರಾಜ್ಯ ಪರಿಷತ್ತುಗಳ ನಿಗಮನ

23. ರಾಜ್ಯ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ

24. ಚುನಾವಣೆಗಳ ವಿಧಾನ

25. ಪದಾವಧಿ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳು

26. ಸಿಬ್ಬಂದಿ, ಪರಿಶ್ರಮ ಧನ ಮತ್ತು ಭತ್ಯೆಗಳು

26ಎ. ಪರಿಶೀಲನೆ

27. ಕಾರ್ಯ ನಿರ್ವಾಹಕ ಸಮಿತಿ

28. ಒದಗಿಸಬೇಕಾದ ಮಾಹಿತಿ

## ಅಧ್ಯಾಯ – IV

### ಔಷಧ ತಯಾರಕರ ನೋಂದಣಿ

29. ರಿಜಿಸ್ಟರುಗಳ ತಯಾರಿಕೆ ಮತ್ತು ನಿರ್ವಹಣೆ

30. ಮೊದಲನೇ ರಿಜಿಸ್ಟರಿನ ತಯಾರಿಕೆ

31. ಮೊದಲನೇ ರಿಜಿಸ್ಟರಿನಲ್ಲಿ ನಮೂದು ಮಾಡುವುದಕ್ಕಾಗಿ ಅರ್ಹತೆಗಳು

32. ತರುವಾಯದ ನೋಂದಣಿಗಾಗಿ ಅರ್ಹತೆಗಳು

32ಎ. ಕೆಲವು ವ್ಯಕ್ತಿಗಳ ನೋಂದಣಿಗಾಗಿ ವಿಶೇಷ ಉಪಬಂಧಗಳು

32ಬಿ. ಸ್ಥಳಾಂತರಿತ ವ್ಯಕ್ತಿಗಳ, ಮರಳಿ ಕಳುಹಿಸಿರುವ ಮತ್ತು ಇತರ ವ್ಯಕ್ತಿಗಳ ನೋಂದಣಿಗಾಗಿ ವಿಶೇಷ ಉಪಬಂಧಗಳು

33. ನೋಂದಣಿ ಬಗೆಗಿನ ಅರ್ಜಿಗಳ ಪರಿಶೋಧನೆ

34. ನವೀಕರಣ ಫೀಜು
35. ಹೆಚ್ಚಿನ ಅರ್ಹತೆಗಳನ್ನು ನಮೂದು ಮಾಡುವುದು
36. ರಿಜಿಸ್ಟರ್‌ನಿಂದ ತೆಗೆದುಹಾಕುವುದು
37. ರಿಜಿಸ್ಟರಿಗೆ ಪುನಃ ಸೇರಿಸುವುದು
38. ಇತರ ಅಧಿಕಾರ ವ್ಯಾಪ್ತಿಯ ಪ್ರತಿಷೇಧ
39. ನೋಂದಣಿ ಪ್ರಮಾಣ ಪತ್ರಗಳ ದ್ವಿಪ್ರತಿಯನ್ನು ಕೊಡುವುದು
40. ರಿಜಿಸ್ಟರಿನ ಮುದ್ರಣ ಮತ್ತು ಅದರಲ್ಲಿನ ನಮೂದುಗಳ ಸಾಕ್ಷ್ಯದ ಮಹತ್ವ

**ಅಧ್ಯಾಯ - V**

**ಸಂಕೀರ್ಣ**

41. ನೋಂದಾಯಿಸಲಾಗಿದೆ ಎಂದು ಸುಳ್ಳಾಗಿ ಕ್ಲೇಮು ಮಾಡುವುದಕ್ಕಾಗಿ ದಂಡನೆ
42. ನೋಂದಾಯಿಸಿಕೊಂಡಿಲ್ಲದ ವ್ಯಕ್ತಿಗಳು ಔಷಧವನ್ನು ತಯಾರಿಸಿ ಕೊಡುವುದು
43. ನೋಂದಣಿ ಪ್ರಮಾಣ ಪತ್ರವನ್ನು ಒಪ್ಪಿಸಲು ತಪ್ಪುವುದು
44. ಕೇಂದ್ರ ಪರಿಷತ್ತಿಗೆ ಫೀಜಿನ ಭಾಗದ ಸಂದಾಯ
45. ವಿಚಾರಣಾ ಆಯೋಗದ ನೇಮಕಾತಿ
46. ನಿಯಮ ರಚನಾಧಿಕಾರ

# ಔಷಧಗಾರಿಕೆ ಅಧಿನಿಯಮ, 1948

## (1948ರ ಅಧಿನಿಯಮ ಸಂಖ್ಯೆ 8)

[4ನೇ ಮಾರ್ಚ್ 1948]

ಔಷಧಗಾರಿಕೆಯ ವೃತ್ತಿಯನ್ನು ನಿಯಂತ್ರಿಸುವ ಅಧಿನಿಯಮ.

ಔಷಧಗಾರಿಕೆ ವೃತ್ತಿ ಮತ್ತು ಆಚರಣೆಯನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಆ ಉದ್ದೇಶಕ್ಕಾಗಿ ಔಷಧಗಾರಿಕೆ ಪರಿಷತ್ತುಗಳನ್ನು ರಚಿಸುವುದಕ್ಕಾಗಿ ಉತ್ತಮ ವ್ಯವಸ್ಥೆಯನ್ನು ಮಾಡುವುದು ವಿಹಿತವಾಗಿರುವುದರಿಂದ;

ಈ ಮೂಲಕ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

### ಪ್ರಾಸ್ತಾವಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಔಷಧಗಾರಿಕೆ ಅಧಿನಿಯಮ, 1948 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೂಡಲೇ ಜಾರಿಗೆ ಬರತಕ್ಕುದು, ಆದರೆ III, IV ಮತ್ತು Vನೇ ಅಧ್ಯಾಯಗಳು ಯಾವುದೇ ನಿರ್ದಿಷ್ಟ ರಾಜ್ಯದಲ್ಲಿ ಈ ಬಗ್ಗೆ ರಾಜ ಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ರಾಜ್ಯ ಸರ್ಕಾರವು ಗೊತ್ತು ಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕುದು:

ಪರಂತು, 1956ರ ನವೆಂಬರ್ ಒಂದನೇ ದಿವಸದಂದು ರಾಜ್ಯಗಳ ಪುನರ್ವಿಂಗಡಣೆಯಿಂದ ಉಂಟಾದ ಪ್ರಾದೇಶಿಕ ಬದಲಾವಣೆಗಳ ಕಾರಣದಿಂದ, III, IV ಮತ್ತು Vನೇ ಅಧ್ಯಾಯಗಳು ಒಂದು ರಾಜ್ಯದ ಒಂದು ಭಾಗದಲ್ಲಿ ಮಾತ್ರ ಪರಿಣಾಮವನ್ನು ಹೊಂದಿರುವಲ್ಲಿ, ಸದರಿ ಅಧ್ಯಾಯಗಳು ಆ ರಾಜ್ಯದ ಉಳಿದ ಭಾಗದಲ್ಲಿ ರಾಜ್ಯ ಸರ್ಕಾರವು ಅದೇ ರೀತಿಯಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕುದು.

2. **ಅರ್ಥ ವಿವರಣೆ.**- ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) " ಒಪ್ಪಂದ " ಎಂದರೆ 20ನೇ ಪ್ರಕರಣದ ಮೇರೆಗೆ ಮಾಡಿಕೊಂಡ ಒಂದು ಒಪ್ಪಂದ;

(ಬಿ) " ಅನುಮೋದಿಸಲಾದುದು " ಎಂದರೆ 12ನೇ ಪ್ರಕರಣದ ಅಥವಾ 14ನೇ ಪ್ರಕರಣದ ಮೇರೆಗೆ ಕೇಂದ್ರ ಪರಿಷತ್ತು ಅನುಮೋದಿಸಿದುದು;

(ಸಿ) " ಕೇಂದ್ರ ಪರಿಷತ್ತು " ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಭಾರತ ಔಷಧಗಾರಿಕೆ ಪರಿಷತ್ತು;

(ಡಿ) " ಕೇಂದ್ರ ರಿಜಿಸ್ಟರು " ಎಂದರೆ 15ಎ ಪ್ರಕರಣದ ಮೇರೆಗೆ ಕೇಂದ್ರ ಪರಿಷತ್ತು ಇಟ್ಟಿರುವ ಔಷಧ ತಯಾರಕರ ರಿಜಿಸ್ಟರು;

(ಡಿಎ) " ಕಾರ್ಯನಿರ್ವಾಹಕ ಸಮಿತಿ " ಎಂದರೆ ಸಂದರ್ಭವು ಅಗತ್ಯಪಡಿಸಿದಂತೆ ಕೇಂದ್ರ ಪರಿಷತ್ತು ಅಥವಾ ರಾಜ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿ;

(ಇ) “ ಭಾರತೀಯ ವಿಶ್ವವಿದ್ಯಾನಿಲಯ ” ಎಂದರೆ ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಧಿನಿಯಮ, 1956 (1956ರ 3)ರ 3ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಬರುವ ವಿಶ್ವವಿದ್ಯಾನಿಲಯ ಮತ್ತು ಅದು ಈ ಬಗ್ಗೆ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಸಂಸ್ಥೆಗಳಾಗಿರುವಂಥ ಇತರ ಸಂಸ್ಥೆಗಳನ್ನೂ ಒಳಗೊಳ್ಳುತ್ತದೆ;

(ಎಫ್) “ ಮೆಡಿಕಲ್ ಪ್ರಾಕ್ಟೀಷನರ್ ” ಎಂದರೆ-

(i) ಭಾರತೀಯ ವೈದ್ಯಕೀಯ ಪದವಿಗಳ ಅಧಿನಿಯಮ, 1916 (1916ರ 7)ರ 3ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ಅಥವಾ ಅಧಿಸೂಚಿಸಿರುವ ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರವು ಕೊಟ್ಟಿರುವ ಅರ್ಹತೆಯನ್ನು ಹೊಂದಿರುವ; ಅಥವಾ

(ii) ಆಧುನಿಕ ವೈಜ್ಞಾನಿಕ ಔಷಧ ಪದ್ಧತಿಯ ವೃತ್ತಿಯನ್ನು ನಡೆಸುತ್ತಿರುವ ವ್ಯಕ್ತಿಗಳ ನೋಂದಣಿಗಾಗಿ ಇಟ್ಟಿರುವ ರಾಜ್ಯದ ವೈದ್ಯಕೀಯ ರಿಜಿಸ್ಟರಿನಲ್ಲಿ ನೋಂದಾಯಿಸಿಕೊಂಡಿರುವ ಅಥವಾ ನೋಂದಣಿಗೆ ಅರ್ಹನಾಗಿರುವ; ಅಥವಾ

(iii) (i)ನೇ ಉಪಖಂಡ ಅಥವಾ (ii)ನೇ ಉಪಖಂಡದೊಳಗೆ ಬರದೆ ಇದ್ದಾಗ್ಯೂ, ಈ ಅಧಿನಿಯಮದ ಉದ್ದೇಶಗಳಿಗಾಗಿ ಔಷಧದ ಆಧುನಿಕ ವೈಜ್ಞಾನಿಕ ಪದ್ಧತಿಯ ವೃತ್ತಿಯನ್ನು ನಡೆಸುತ್ತಿರುವ ವ್ಯಕ್ತಿಯೆಂದು, ಈ ಬಗ್ಗೆ ರಾಜ್ಯ ಸರ್ಕಾರವು ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಘೋಷಿತನಾಗಿರುವ ಹಾಗೂ ರಾಜ್ಯದ ವೈದ್ಯಕೀಯ ರಿಜಿಸ್ಟರಿನಲ್ಲಿ ನೋಂದಾಯಿತನಾಗಿರುವ; ಅಥವಾ

(iv) ದಂತವೈದ್ಯ ಅಧಿನಿಯಮ, 1948 (1948ರ 16)ರ ಮೇರೆಗೆ ರಾಜ್ಯದ ದಂತ ವೈದ್ಯರ ರಿಜಿಸ್ಟರಿನಲ್ಲಿ ನೋಂದಾಯಿಸಿಕೊಂಡಿರುವ ಅಥವಾ ನೋಂದಣಿಗೆ ಅರ್ಹನಾಗಿರುವ; ಅಥವಾ

(v) ಪಶುವೈದ್ಯ ಔಷಧದ ಆಚರಣೆಯಲ್ಲಿ ತೊಡಗಿರುವ ಮತ್ತು ರಾಜ್ಯ ಸರ್ಕಾರವು ಅನುಮೋದಿಸಿದ ಅರ್ಹತೆಗಳನ್ನು ಹೊಂದಿರುವ

-ವ್ಯಕ್ತಿ;

(ಜಿ) “ ನಿಯಮಿಸಲಾದುದು ” ಎಂದರೆ ಅಧ್ಯಾಯ-IIರಲ್ಲಿ 18ನೇ ಪ್ರಕರಣದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಮಿಸಲಾದುದು ಮತ್ತು ಬೇರೆ ಕಡೆಯಲ್ಲಿ 66ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) “ ರಿಜಿಸ್ಟರು ” ಎಂದರೆ IVನೇ ಅಧ್ಯಾಯದ ಮೇರೆಗೆ ಸಿದ್ಧಪಡಿಸಿದ ಮತ್ತು ಇಟ್ಟುಕೊಂಡು ಬಂದ ಔಷಧ ತಯಾರಕರ ರಿಜಿಸ್ಟರು;

(ಐ) “ ನೋಂದಾಯಿತ ಔಷಧ ತಯಾರಕ ” ಎಂದರೆ ಯಾರ ಹೆಸರನ್ನು, ಯಾವ ರಾಜ್ಯದಲ್ಲಿ ಅವನು ತತ್ಕಾಲದಲ್ಲಿ ವಾಸವಾಗಿರುವನೋ ಅಥವಾ ಔಷಧಗಾರಿಕೆಯ ವೃತ್ತಿ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಆ ರಾಜ್ಯದ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನಮೂದಿಸಲಾಗಿದೆಯೋ ಆ ವ್ಯಕ್ತಿ;

(ಜೆ) “ ರಾಜ್ಯ ಪರಿಷತ್ತು ” ಎಂದರೆ, 19ನೇ ಪ್ರಕರಣದ ಮೇರೆಗೆ ರಚಿಸಲಾದ ರಾಜ್ಯ ಔಷಧಗಾರಿಕೆ ಪರಿಷತ್ತು ಮತ್ತು ಅದು 20ನೇ ಪ್ರಕರಣದ ಮೇರೆಗಿನ ಒಪ್ಪಂದಕ್ಕೆ ಅನುಸಾರವಾಗಿ ರಚಿಸಲಾದ ಔಷಧಗಾರಿಕೆಯ ಜಂಟಿ ಪರಿಷತ್ತನ್ನು ಒಳಗೊಳ್ಳುತ್ತದೆ;

(ಕೆ) " ವಿಶ್ವವಿದ್ಯಾನಿಲಯ ಅನುದಾನ ಆಯೋಗ " ಎಂದರೆ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಧಿನಿಯಮ, 1956 (1956ರ 3)ರ 4ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾನಿಲಯ ಅನುದಾನ ಆಯೋಗ.

## ಅಧ್ಯಾಯ - II

## ಭಾರತ ಔಷಧಗಾರಿಕೆ ಪರಿಷತ್ತು

**3. ಕೇಂದ್ರ ಪರಿಷತ್ತಿನ ಸ್ಥಾಪನೆ ಮತ್ತು ರಚನೆ.**- ಕೇಂದ್ರ ಸರ್ಕಾರವು, ಆದಷ್ಟು ಬೇಗ, ಈ ಕೆಳಕಂಡ ಸದಸ್ಯರನ್ನೊಳಗೊಂಡ ಕೇಂದ್ರ ಪರಿಷತ್ತನ್ನು ಸ್ಥಾಪಿಸತಕ್ಕುದು, ಎಂದರೆ:-

(ಎ) ಔಷಧಗಾರಿಕೆಯಲ್ಲಿ ಪದವಿ ಅಥವಾ ಡಿಪ್ಲೊಮಾವನ್ನು ಕೊಡುವಂಥ ಭಾರತೀಯ ವಿಶ್ವವಿದ್ಯಾನಿಲಯ ಅಥವಾ ಅದಕ್ಕೆ ಸಂಯೋಜನೆಗೊಂಡ ಕಾಲೇಜಿನ ಬೋಧಕ ಸಿಬ್ಬಂದಿ ವರ್ಗದ ವ್ಯಕ್ತಿಗಳಿಂದ ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಅಧಿಕಾರದ ಮೂಲಕ ಆಯ್ಕೆಗೊಂಡ ಆರು ಸದಸ್ಯರು, ಅವರ ಪೈಕಿ, ಔಷಧ ತಯಾರಿಕಾ ರಸಾಯನಶಾಸ್ತ್ರ, ಔಷಧಗಾರಿಕೆ, ಔಷಧಶಾಸ್ತ್ರ ಮತ್ತು ಔಷಧ ಮೂಲಿಕೆಶಾಸ್ತ್ರ- ಈ ಪ್ರತಿಯೊಂದು ವಿಷಯದ ಕನಿಷ್ಠಪಕ್ಷ ಒಬ್ಬ ಬೋಧಕನು ಇರತಕ್ಕುದು;

(ಬಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಸದಸ್ಯರು- ಅವರ ಪೈಕಿ, ಕನಿಷ್ಠಪಕ್ಷ ನಾಲ್ವರು ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನಶಾಸ್ತ್ರದಲ್ಲಿ ಪದವಿ ಅಥವಾ ಡಿಪ್ಲೊಮಾ ಹೊಂದಿರುವ ಮತ್ತು ಅದರಲ್ಲಿ ವೃತ್ತಿಯನ್ನು ನಡೆಸುತ್ತಿರುವ ವ್ಯಕ್ತಿಗಳಾಗಿರತಕ್ಕುದು;

(ಸಿ) ಭಾರತದ ವೈದ್ಯಕೀಯ ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸಿದ ಒಬ್ಬ ಸದಸ್ಯ;

(ಡಿ) ಆರೋಗ್ಯ ಸೇವೆಗಳ ಮಹಾನಿರ್ದೇಶಕ, ಪದನಿಮಿತ್ತ ಅಥವಾ ಅವನು ಯಾವುದೇ ಸಭೆಯಲ್ಲಿ ಹಾಜರಿರಲು ಅಸಮರ್ಥನಾದರೆ, ಹಾಜರಾಗಲು ಬರಹದಲ್ಲಿ ಅವನು ಅಧಿಕೃತಗೊಳಿಸುವ ಒಬ್ಬ ವ್ಯಕ್ತಿ;

(ಡಿಡಿ) ಭಾರತದ ಔಷಧ ನಿಯಂತ್ರಣಾಧಿಕಾರಿ, ಪದನಿಮಿತ್ತ, ಅಥವಾ ಅವನು ಯಾವುದೇ ಸಭೆಯಲ್ಲಿ ಹಾಜರಿರಲು ಅಸಮರ್ಥನಾದರೆ, ಹಾಜರಾಗಲು ಬರಹದಲ್ಲಿ ಅವನು ಅಧಿಕೃತಗೊಳಿಸುವ ಒಬ್ಬ ವ್ಯಕ್ತಿ;

(ಇ) ಕೇಂದ್ರ ಔಷಧಗಳ ಪ್ರಯೋಗ ಶಾಲೆಯ ನಿರ್ದೇಶಕ, ಪದನಿಮಿತ್ತ;

(ಎಫ್) ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗದ ಒಬ್ಬ ಪ್ರತಿನಿಧಿ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಒಬ್ಬ ಪ್ರತಿನಿಧಿ;

(ಜಿ) ನೋಂದಾಯಿತ ಔಷಧ ತಯಾರಕನಾಗಿರುವ, ಪ್ರತಿಯೊಂದು ರಾಜ್ಯ ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸಿದ, ಪ್ರತಿ ರಾಜ್ಯವನ್ನು ಪ್ರತಿನಿಧಿಸಲು ಒಬ್ಬ ಸದಸ್ಯ;

(ಹೆಚ್) ನೋಂದಾಯಿತ ಔಷಧ ತಯಾರಕನಾಗಿರುವ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಪ್ರತಿ ರಾಜ್ಯವನ್ನು ಪ್ರತಿನಿಧಿಸಲು ಒಬ್ಬ ಸದಸ್ಯ;

ಪರಂತು, ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1976 - ಇದು ಜಾರಿಗೆ ಬಂದಂಥ ದಿನಾಂಕದಿಂದ ಐದು ವರ್ಷಗಳವರೆಗೆ ಪ್ರತಿಯೊಂದು ಸಂಘ ರಾಜ್ಯ ಕ್ಷೇತ್ರದ ಸರ್ಕಾರವು (ಜಿ) ಖಂಡದ ಮೇರೆಗೆ ಒಬ್ಬ ಸದಸ್ಯನನ್ನು ಚುನಾಯಿಸುವುದಕ್ಕೆ ಬದಲು, ಆ ರಾಜ್ಯ ಕ್ಷೇತ್ರವನ್ನು ಪ್ರತಿನಿಧಿಸಲು 31ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಹನಾದ ವ್ಯಕ್ತಿಯಾಗಿರುವ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡತಕ್ಕುದು.

**4. ಕೇಂದ್ರ ಪರಿಷತ್ತಿನ ನಿಗಮನ.–** 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಪರಿಷತ್ತು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ ಮತ್ತು ಧಾರಣ ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಭಾರತದ ಔಷಧಗಾರಿಕೆ ಪರಿಷತ್ತು ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕುದು, ಮತ್ತು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

**5. ಕೇಂದ್ರ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ.–** (1) ಕೇಂದ್ರ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಸದರಿ ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸತಕ್ಕುದು.

(2) ಅಧ್ಯಕ್ಷ ಅಥವಾ ಉಪಾಧ್ಯಕ್ಷನು, ಹಾಗೆ, ಐದು ವರ್ಷಗಳನ್ನು ಮೀರದ ಮತ್ತು ಕೇಂದ್ರ ಪರಿಷತ್ತಿನ ಸದಸ್ಯನಾಗಿ ತನ್ನ ಅವಧಿಯು ಮುಕ್ತಾಯವಾದ ಮೇಲೆ ವಿಸ್ತರಿಸಿದ ಅವಧಿಯವರೆಗೆ ಪದಧಾರಣ ಮಾಡತಕ್ಕುದು, ಆದರೆ ತಾನು ಕೇಂದ್ರ ಪರಿಷತ್ತಿನ ಸದಸ್ಯನಾಗಿರುವುದಕ್ಕೆ ಒಳಪಟ್ಟು ಅವನು ಮರು ಚುನಾವಣೆಗಾಗಿ ಅರ್ಹನಾಗಿರತಕ್ಕುದು:

ಪರಂತು, ಯಾವ ಪೂರ್ಣ ಅವಧಿಯವರೆಗೆ ಅವನನ್ನು ಅಧ್ಯಕ್ಷ ಅಥವಾ ಉಪಾಧ್ಯಕ್ಷನೆಂದು ಚುನಾಯಿಸಲಾಗಿದೆಯೋ ಆ ಪೂರ್ಣ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಕೇಂದ್ರ ಪರಿಷತ್ತಿನ ಸದಸ್ಯನಾಗಿ ಅವನ ಪದಾವಧಿಯು ಮುಕ್ತಾಯವಾದರೆ, ಅವನು ಕೇಂದ್ರ ಪರಿಷತ್ತಿನ ಸದಸ್ಯನೆಂದು ಪುನಃ ಚುನಾಯಿತನಾದರೆ ಅಥವಾ ಪುನಃ ನಾಮನಿರ್ದೇಶನಗೊಂಡರೆ, ಯಾವ ಪೂರ್ಣ ಅವಧಿಯವರೆಗೆ ಅಂಥ ಪದಕ್ಕೆ ಅವನನ್ನು ಚುನಾಯಿಸಲಾಯಿತೋ ಆ ಪೂರ್ಣ ಅವಧಿಯವರೆಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನೆಂದು ಪದಧಾರಣ ಮಾಡಿರುವುದು ಮುಂದುವರಿಯತಕ್ಕುದು.

**6. ಚುನಾವಣೆಗಳ ವಿಧಾನ.–** ಈ ಅಧ್ಯಾಯದ ಮೇರೆಗಿನ ಚುನಾವಣೆಗಳನ್ನು ನಿಯಮಿಸಿದ ರೀತಿಯಲ್ಲಿ ನಡೆಸತಕ್ಕುದು ಮತ್ತು ಅಂಥ ಯಾವುದೇ ಚುನಾವಣೆಯ ಬಗ್ಗೆ ಯಾವುದೇ ವಿವಾದ ಉದ್ಭವಿಸುದಲ್ಲಿ, ಅದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕುದು; ಆ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕುದು.

**7. ಪದಾವಧಿ ಮತ್ತು ಆಕಸ್ಮಿಕ ಖಾಲಿಸ್ಥಾನಗಳು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಸದಸ್ಯನು ಅವನ ನಾಮನಿರ್ದೇಶನದ ಅಥವಾ ಚುನಾವಣೆಯ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯು ಕ್ರಮಬದ್ಧವಾಗಿ ನಾಮನಿರ್ದೇಶನಗೊಳ್ಳುವವರೆಗೆ ಅಥವಾ ಚುನಾಯಿತನಾಗುವವರೆಗೆ – ಇವುಗಳಲ್ಲಿ ಯಾವುದು ಹೆಚ್ಚಿನದೋ ಆ ಅವಧಿಯವರೆಗೆ ಧಾರಣ ಮಾಡತಕ್ಕುದು.

(2) ಒಬ್ಬ ನಾಮನಿರ್ದೇಶಿತ ಅಥವಾ ಚುನಾಯಿತ ಸದಸ್ಯನು ಯಾವುದೇ ಕಾಲದಲ್ಲಿ ತಾನು ರುಜು ಮಾಡಿ ಅಧ್ಯಕ್ಷನಿಗೆ ಸಂಬೋಧಿಸಿ ಪತ್ರಬರೆಯುವ ಮೂಲಕ ಅವನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಅಂಥ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕುದು.

(3) ಕೇಂದ್ರ ಪರಿಷತ್ತಿನ ಅಭಿಪ್ರಾಯದಲ್ಲಿ ಒಬ್ಬ ನಾಮನಿರ್ದೇಶಿತ ಅಥವಾ ಚುನಾಯಿತ ಸದಸ್ಯನು ಸಾಕಷ್ಟು ಕಾರಣವಿಲ್ಲದೆ ಕೇಂದ್ರ ಪರಿಷತ್ತಿನ ಮೂರು ಕ್ರಮಾನುಗತ ಸಭೆಗಳಿಗೆ ಗೈರುಹಾಜರಾದರೆ, ಅಥವಾ ಅವನು 3ನೇ ಪ್ರಕರಣದ (ಎ), (ಸಿ) ಅಥವಾ (ಜಿ) ಖಂಡಗಳ ಮೇರೆಗೆ ಚುನಾಯಿತನಾದರೆ, ಸಂದರ್ಭಾನುಸಾರ ಅವನು ಬೋಧಕ ಸಿಬ್ಬಂದಿ, ಭಾರತ ವೈದ್ಯಕೀಯ ಪರಿಷತ್ತಿನ ಸದಸ್ಯ ಅಥವಾ ನೋಂದಾಯಿತ ಔಷಧ ತಯಾರಕನಾಗಿರುವುದು ನಿಂತುಹೋದರೆ, ಅವನ ಸ್ಥಾನವು ಖಾಲಿಯಾಗಿರುವುದಾಗಿ ಭಾವಿಸತಕ್ಕುದು.

(4) ಕೇಂದ್ರ ಪರಿಷತ್ತಿನಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ಸಂದರ್ಭಾನುಸಾರ ಹೊಸ ನಾಮನಿರ್ದೇಶನದ ಅಥವಾ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕುದು ಮತ್ತು ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ವ್ಯಕ್ತಿಯು ಯಾವ ಸದಸ್ಯನ ಸ್ಥಾನವನ್ನು

ವಹಿಸಿಕೊಳ್ಳುವನೋ ಆ ಸದಸ್ಯನನ್ನು ಯಾವ ಅವಧಿಯವರೆಗೆ ನಾಮನಿರ್ದೇಶನ ಮಾಡಲಾಗಿತ್ತೋ ಅಥವಾ ಚುನಾಯಿಸಲಾಗಿತ್ತೋ ಆ ಅವಧಿಯ ಉಳಿದ ಭಾಗದವರೆಗೆ ಮಾತ್ರ ಪದಧಾರಣ ಮಾಡತಕ್ಕುದು.

(5) ಕೇಂದ್ರ ಪರಿಷತ್ತು ಮಾಡಿದ ಯಾವುದೇ ಕಾರ್ಯವನ್ನು, ಕೇಂದ್ರ ಪರಿಷತ್ತಿನಲ್ಲಿ ಯಾವುದೇ ಖಾಲಿ ಸ್ಥಾನವು ಇದೆಯೆಂಬ ಅಥವಾ ಅದರ ಸ್ಥಾಪನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

(6) ಕೇಂದ್ರ ಪರಿಷತ್ತಿನ ಸದಸ್ಯರು ಮರು ನಾಮನಿರ್ದೇಶನಕ್ಕೆ ಅಥವಾ ಮರುಚುನಾವಣೆಗೆ ಅರ್ಹರಾಗಿರತಕ್ಕುದು.

**8. ಸಿಬ್ಬಂದಿ, ಪರಿಶ್ರಮಧನ ಮತ್ತು ಭತ್ಯಗಳು.**– ಕೇಂದ್ರ ಪರಿಷತ್ತು–

(ಎ) ಒಬ್ಬ ರಿಜಿಸ್ಟ್ರಾರ್‌ನನ್ನು ನೇಮಕ ಮಾಡತಕ್ಕುದು. ಅವನು ಆ ಪರಿಷತ್ತಿನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕುದು ಮತ್ತು ಅವನು, ಪರಿಷತ್ತು ವಿಹಿತವೆಂದು ಭಾವಿಸಿದರೆ ಅದರ ಖಜಾಂಚಿಯಾಗಿಯೂ ಸಹ ಕಾರ್ಯನಿರ್ವಹಿಸಬಹುದು.

(ಬಿ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ತನಗೆ ಸಾಧ್ಯವಾಗುವಂತೆ ಆ ಪರಿಷತ್ತು, ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡತಕ್ಕುದು;

(ಸಿ) ರಿಜಿಸ್ಟ್ರಾರ್ ಅಥವಾ ಯಾವನೇ ಇತರ ಅಧಿಕಾರಿ ಅಥವಾ ನೌಕರನು ಅವನ ಕರ್ತವ್ಯಗಳನ್ನು ಯುಕ್ತವಾಗಿ ನೆರವೇರಿಸುವುದಕ್ಕಾಗಿ ಪರಿಷತ್ತು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಭದ್ರತೆಯನ್ನು ಆ ರಿಜಿಸ್ಟ್ರಾರ್, ಅಥವಾ ಯಾವನೇ ಇತರ ಅಧಿಕಾರಿ ಅಥವಾ ನೌಕರನಿಂದ ಅಗತ್ಯಪಡಿಸತಕ್ಕುದು ಮತ್ತು ತೆಗೆದುಕೊಳ್ಳತಕ್ಕುದು; ಮತ್ತು

(ಡಿ) ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ–

(i) ಆ ಪರಿಷತ್ತಿನ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಪರಿಶ್ರಮಧನ ಮತ್ತು ಭತ್ಯೆಗಳನ್ನು,

(ii) ಆ ಪರಿಷತ್ತಿನ ಅಧಿಕಾರಿಗಳು ಮತ್ತು ನೌಕರರ ವೇತನ ಮತ್ತು ಭತ್ಯೆಗಳು ಮತ್ತು ಇತರೆ ಸೇವಾ ಷರತ್ತುಗಳನ್ನು

–ನಿಗದಿಪಡಿಸತಕ್ಕುದು.

**9. ಕಾರ್ಯನಿರ್ವಾಹಕ ಸಮಿತಿ.**– (1) ಕೇಂದ್ರ ಪರಿಷತ್ತು, ಆದಷ್ಟು ಬೇಗ, ಅಧ್ಯಕ್ಷ (ಅವನು ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನಾಗಿರತಕ್ಕುದು) ಮತ್ತು ಉಪಾಧ್ಯಕ್ಷ, ಪದನಿಮಿತ್ತ ಮತ್ತು ಕೇಂದ್ರ ಪರಿಷತ್ತು ತನ್ನ ಸದಸ್ಯರೊಳಗಿಂದ ಆಯ್ಕೆ ಮಾಡಿದ ಇತರ ಐದು ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕುದು.

(2) ಕಾರ್ಯನಿರ್ವಾಹಕ ಸಮಿತಿಯ ಸದಸ್ಯನು, ಹಾಗೆ, ಕೇಂದ್ರ ಪರಿಷತ್ತಿನ ಸದಸ್ಯನಾಗಿ ಅವನ ಪದಾವಧಿಯು ಮುಕ್ತಾಯವಾಗುವವರೆಗೆ ಪದಧಾರಣಮಾಡತಕ್ಕುದು, ಆದರೆ, ಅವನು ಕೇಂದ್ರ ಪರಿಷತ್ತಿನ ಸದಸ್ಯನಾಗಿರುವುದಕ್ಕೊಳಪಟ್ಟು, ಮರುಚುನಾವಣೆಗೆ ಅರ್ಹನಾಗಿರತಕ್ಕುದು.

(3) ಈ ಅಧಿನಿಯಮದ ಮೂಲಕ ಕಾರ್ಯನಿರ್ವಾಹಕ ಸಮಿತಿಗೆ ಪ್ರದಾನ ಮಾಡಿದ ಮತ್ತು ವಿಧಿಸಿದ ಅಧಿಕಾರಗಳು ಮತ್ತು ಕರ್ತವ್ಯಗಳ ಜೊತೆಗೆ, ನಿಯಮಿಸಬಹುದಾದಂಥ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಅದು ಚಲಾಯಿಸತಕ್ಕುದು ಮತ್ತು ನಿರ್ವಹಿಸತಕ್ಕುದು.

**9ಎ. ಇತರ ಸಮಿತಿಗಳು.**– (1) ಕೇಂದ್ರ ಪರಿಷತ್ತು, ತಾನು ಅವಶ್ಯವೆಂದು ಭಾವಿಸಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಉದ್ದೇಶಗಳಿಗಾಗಿ ಮತ್ತು ಅದು ನಿರ್ದಿಷ್ಟಪಡಿಸಬಹುದಾದಂತೆ ಐದು ವರ್ಷಗಳನ್ನು ಮೀರದಂಥ ಅವಧಿಗಳಿಗಾಗಿ ತನ್ನ ಸದಸ್ಯರೊಳಗಿಂದ ಇತರ ಸಮಿತಿಗಳನ್ನು ರಚಿಸಬಹುದು ಮತ್ತು ಅಂಥದೇ ಅವಧಿಗಾಗಿ ಕೇಂದ್ರ ಪರಿಷತ್ತಿನ ಸದಸ್ಯರಾಗಿಲ್ಲದೆ ಇರುವ ವ್ಯಕ್ತಿಗಳನ್ನು ಅಂಥ ಸಮಿತಿಗಳ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.

(2) ಅಂಥ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾದ ಪರಿಶ್ರಮಧನ ಮತ್ತು ಭತ್ಯೆಗಳನ್ನು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಕೇಂದ್ರ ಪರಿಷತ್ತು ನಿಗದಿ ಪಡಿಸತಕ್ಕುದು.

(3) ಅಂಥ ಸಮಿತಿಗಳ ಮುಂದಿರುವ ಕಾರ್ಯಕಲಾಪವನ್ನು ಈ ಅಧಿನಿಯಮದ ಮೇರೆಗೆ ರಚಿಸಬಹುದಾದಂಥ ವಿನಿಯಮಗಳಿಗೆ ಅನುಸಾರವಾಗಿ ನಡೆಸತಕ್ಕುದು.

**10. ಶಿಕ್ಷಣ ವಿನಿಯಮಗಳು.**– (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಕೇಂದ್ರ ಪರಿಷತ್ತು, ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟು, ಔಷಧ ತಯಾರಕನೆಂದು ಅರ್ಹತೆ ಪಡೆಯಲು ಅಗತ್ಯವಾದ ಶಿಕ್ಷಣದ ಕನಿಷ್ಠ ಮಟ್ಟವನ್ನು ನಿಯಮಿಸಿ ಶಿಕ್ಷಣ ವಿನಿಯಮಗಳು ಎಂದು ಕರೆಯಲಾಗುವ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಆ ಶಿಕ್ಷಣ ವಿನಿಯಮಗಳು–

(ಎ) ಪರೀಕ್ಷೆಗೆ ಪ್ರವೇಶ ಪಡೆಯುವುದಕ್ಕೆ ಮುಂಚೆ ಕೈಕೊಳ್ಳಬೇಕಾದ ಅಧ್ಯಯನ ಮತ್ತು ಪ್ರಾಯೋಗಿಕ ತರಬೇತಿಯ ಸ್ವರೂಪ ಮತ್ತು ಅವಧಿ;

(ಬಿ) ಅನುಮೋದಿತ ಅಧ್ಯಯನ ಕೋರ್ಸನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಸಾಧನ ಸಾಮಗ್ರಿ ಮತ್ತು ಸೌಲಭ್ಯಗಳು;

(ಸಿ) ಆ ಪರೀಕ್ಷೆಯ ವಿಷಯಗಳು ಮತ್ತು ಅದರಲ್ಲಿ ಹೊಂದಬೇಕಾದ ಮಟ್ಟಗಳು;

(ಡಿ) ಪರೀಕ್ಷೆಗಳಿಗೆ ಪ್ರವೇಶಕ್ಕಾಗಿ ಯಾವುದೇ ಇತರ ಷರತ್ತುಗಳು

–ಇವುಗಳನ್ನು ನಿಯಮಿಸಬಹುದು.

(3) ಶಿಕ್ಷಣ ವಿನಿಯಮಗಳ ಕರಡು ಪ್ರತಿಗಳನ್ನು ಮತ್ತು ತರುವಾಯ ಮಾಡಿದ ಅವುಗಳ ಎಲ್ಲಾ ತಿದ್ದುಪಡಿಗಳನ್ನು ಕೇಂದ್ರ ಪರಿಷತ್ತು ಎಲ್ಲಾ ರಾಜ್ಯ ಸರ್ಕಾರಗಳಿಗೆ ಒದಗಿಸತಕ್ಕುದು ಮತ್ತು ಕೇಂದ್ರ ಪರಿಷತ್ತು, ಸಂದರ್ಭಾನುಸಾರ, ಆ ಶಿಕ್ಷಣ ವಿನಿಯಮಗಳನ್ನು ಮತ್ತು ಅವುಗಳ ಯಾವುದೇ ತಿದ್ದುಪಡಿಯನ್ನು, (1)ನೇ ಉಪ-ಪ್ರಕರಣದ ಮೇರೆಗೆ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸುವುದಕ್ಕೆ ಮುಂಚೆ, ಹಿಂದೆ ಹೇಳಿದಂತೆ ಆ ಪ್ರತಿಗಳನ್ನು ಒದಗಿಸಿದ ರಾಜ್ಯಗಳಿಂದ ಮೂರು ತಿಂಗಳೊಳಗೆ ಸ್ವೀಕರಿಸಿದ ಯಾವುದೇ ರಾಜ್ಯ ಸರ್ಕಾರದ ಟಿಪ್ಪಣಿಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

(4) ಆ ಶಿಕ್ಷಣ ವಿನಿಯಮಗಳನ್ನು ರಾಜಪತ್ರದಲ್ಲಿ ಮತ್ತು ಕೇಂದ್ರ ಪರಿಷತ್ತು ನಿರ್ದೇಶಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸತಕ್ಕುದು.

(5) ಕಾರ್ಯನಿರ್ವಾಹಕ ಸಮಿತಿಯು ಕಾಲಕಾಲಕ್ಕೆ ಶಿಕ್ಷಣ ವಿನಿಯಮಗಳ ಪರಿಣಾಮಕಾರಿತ್ವದ ಬಗ್ಗೆ ಕೇಂದ್ರ ಪರಿಷತ್ತಿಗೆ ವರದಿ ಮಾಡತಕ್ಕುದು ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ತಿದ್ದುಪಡಿಗಳನ್ನು ಕೇಂದ್ರ ಪರಿಷತ್ತಿಗೆ ಶಿಫಾರಸ್ಸು ಮಾಡಬಹುದು.

**11. ರಾಜ್ಯಗಳಿಗೆ ಶಿಕ್ಷಣ ವಿನಿಯಮಗಳನ್ನು ಅನ್ವಯಿಸುವುದು.**– IIIನೇ ಅಧ್ಯಾಯದ ಮೇರೆಗೆ ರಾಜ್ಯ ಪರಿಷತ್ತನ್ನು ರಚಿಸಿದ ತರುವಾಯ ಮತ್ತು ರಾಜ್ಯ ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ

ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಶಿಕ್ಷಣ ವಿನಿಯಮಗಳು ರಾಜ್ಯದಲ್ಲಿ ಜಾರಿಗೆ ಬರತಕ್ಕುದೆಂದು ಘೋಷಿಸಬಹುದು:

ಪರಂತು, ಯಾವುದೇ ಅಂಥ ಘೋಷಣೆಯನ್ನು ಮಾಡಿಲ್ಲದೆ ಇರುವಲ್ಲಿ, ಆ ಶಿಕ್ಷಣ ವಿನಿಯಮಗಳು, ಆ ರಾಜ್ಯದಲ್ಲಿ ರಾಜ್ಯ ಪರಿಷತ್ತನ್ನು ರಚಿಸಿದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ಮೇಲೆ ಜಾರಿಗೆ ಬರತಕ್ಕುದು.

**12. ಅನುಮೋದಿತ ಪಠ್ಯಕ್ರಮಗಳು ಮತ್ತು ಪರೀಕ್ಷೆಗಳು.-** (1) ಔಷಧ ತಯಾರಕರಿಗಾಗಿ ಅಧ್ಯಯನ ಕೋರ್ಸನ್ನು ನಡೆಸುವಂಥ ರಾಜ್ಯದಲ್ಲಿನ ಯಾವುದೇ ಪ್ರಾಧಿಕಾರವು ಆ ಕೋರ್ಸಿನ ಅನುಮೋದನೆಗಾಗಿ ಕೇಂದ್ರ ಪರಿಷತ್ತಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಕೇಂದ್ರ ಪರಿಷತ್ತು ತಾನು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಸದರಿ ಅಧ್ಯಯನ ಕೋರ್ಸು ಆ ಶಿಕ್ಷಣ ವಿನಿಯಮಗಳಿಗೆ ಅನುಗುಣವಾಗಿದೆ ಎಂದು ಅದಕ್ಕೆ ಮನದಟ್ಟಾದರೆ, ಅದು ಔಷಧ ತಯಾರಕರಿಗಾಗಿನ ಅನುಮೋದಿತ ಪರೀಕ್ಷೆಗೆ ಪ್ರವೇಶವನ್ನು ಪಡೆಯುವ ಉದ್ದೇಶಕ್ಕಾಗಿ ಸದರಿ ಅಧ್ಯಯನ ಕೋರ್ಸನ್ನು ಅನುಮೋದಿತ ಅಧ್ಯಯನ ಕೋರ್ಸ್ ಆಗಿರುವುದಾಗಿ ಘೋಷಿಸತಕ್ಕದು.

(2) ಔಷಧಗಾರಿಕೆಯಲ್ಲಿ ಪರೀಕ್ಷೆಯನ್ನು ನಡೆಸುವಂಥ ರಾಜ್ಯದಲ್ಲಿನ ಯಾವುದೇ ಪ್ರಾಧಿಕಾರವು ಆ ಪರೀಕ್ಷೆಯನ್ನು ಅನುಮೋದಿಸುವುದಕ್ಕಾಗಿ ಕೇಂದ್ರ ಪರಿಷತ್ತಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಕೇಂದ್ರ ಪರಿಷತ್ತು ತಾನು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಸದರಿ ಪರೀಕ್ಷೆಯು ಆ ಶಿಕ್ಷಣ ವಿನಿಯಮಗಳಿಗೆ ಅನುಗುಣವಾಗಿದೆ ಎಂದು ಅದಕ್ಕೆ ಮನದಟ್ಟಾದರೆ ಸದರಿ ಪರೀಕ್ಷೆಯು, ಈ ಅಧಿನಿಯಮದ ಮೇರೆಗೆ ಔಷಧ ತಯಾರಕನೆಂದು ನೋಂದಣಿಗಾಗಿ ಅರ್ಹತೆ ಪಡೆಯುವ ಉದ್ದೇಶಕ್ಕಾಗಿ ಅನುಮೋದಿತ ಪರೀಕ್ಷೆಯಾಗಿರುವುದಾಗಿ ಘೋಷಿಸತಕ್ಕುದು.

(3) ಅನುಮೋದಿತ ಅಧ್ಯಯನ ಕೋರ್ಸನ್ನು ನಡೆಸುವ ಅಥವಾ ಅನುಮೋದಿತ ಪರೀಕ್ಷೆಯನ್ನು ನಡೆಸುವಂಥ ರಾಜ್ಯಗಳಲ್ಲಿನ ಪ್ರತಿಯೊಂದು ಪ್ರಾಧಿಕಾರವು ಅಧ್ಯಯನ ಕೋರ್ಸುಗಳು ಮತ್ತು ತೆಗೆದುಕೊಳ್ಳಬೇಕಾದ ತರಬೇತಿ ಮತ್ತು ಪರೀಕ್ಷೆಯ ಬಗ್ಗೆ ಅಂಥ ಅಧ್ಯಯನ ಕೋರ್ಸುಗಳು ಮತ್ತು ಪರೀಕ್ಷೆ ತೆಗೆದುಕೊಳ್ಳಬೇಕಾದಂಥ ವಯಸ್ಸುಗಳ ಬಗ್ಗೆ ಮತ್ತು ಸಾಮಾನ್ಯವಾಗಿ ಅಂಥ ಅಧ್ಯಯನ ಕೋರ್ಸುಗಳು ಮತ್ತು ಪರೀಕ್ಷೆಗಾಗಿನ ಅಗತ್ಯತೆಗಳ ಬಗ್ಗೆ ಕಾಲಕಾಲಕ್ಕೆ ಕೇಂದ್ರ ಪರಿಷತ್ತು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕುದು.

**13. ಅನುಮೋದನೆಯನ್ನು ಹಿಂತೆಗೆದುಕೊಳ್ಳುವುದು.-** (1) ಕಾರ್ಯನಿರ್ವಾಹಕ ಸಮಿತಿಯು, ಅನುಮೋದಿತ ಅಧ್ಯಯನ ಕೋರ್ಸು ಅಥವಾ ಅನುಮೋದಿತ ಪರೀಕ್ಷೆಯು ಆ ಶಿಕ್ಷಣ ವಿನಿಯಮಗಳಿಗೆ ಅನುಗುಣವಾಗಿ ಮುಂದುವರೆಯುತ್ತಿಲ್ಲವೆಂದು ಕೇಂದ್ರ ಪರಿಷತ್ತಿಗೆ ವರದಿ ಮಾಡಿದರೆ, ಕೇಂದ್ರ ಪರಿಷತ್ತು, ಸಂದರ್ಭಾನುಸಾರ ಆ ಅಧ್ಯಯನ ಕೋರ್ಸ್ ಅಥವಾ ಪರೀಕ್ಷೆಗೆ ಕೊಟ್ಟ ಅನುಮೋದನೆಯ ಘೋಷಣೆಯನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವ ತನ್ನ ಉದ್ದೇಶದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ನೋಟೀಸನ್ನು ಕೊಡತಕ್ಕುದು ಮತ್ತು ಸದರಿ ಪ್ರಾಧಿಕಾರವು ಅಂಥ ನೋಟೀಸನ್ನು ಸ್ವೀಕರಿಸಿದ ಮೂರು ತಿಂಗಳುಗಳ ಒಳಗೆ ಆ ವಿಷಯದ ಬಗ್ಗೆ ತಾನು ಮಾಡಿಕೊಳ್ಳಲು ಇಚ್ಛಿಸಬಹುದಾದಂಥ ಮನವಿಯನ್ನು ರಾಜ್ಯಸರ್ಕಾರದ ಮೂಲಕ ಕೇಂದ್ರ ಪರಿಷತ್ತಿಗೆ ಕಳುಹಿಸತಕ್ಕುದು.

(2) ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ವೀಕರಿಸಬಹುದಾದಂಥ ಯಾವುದೇ ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಅದರ ಬಗ್ಗೆ ಅಭಿಪ್ರಾಯೋಕ್ತಿಯನ್ನು ಹೇಳುವುದು ಸೂಕ್ತವೆಂದು ರಾಜ್ಯ ಸರ್ಕಾರವು ಯೋಚಿಸಬಹುದಾದಂಥ ಯಾವುದೇ ಅಭಿಪ್ರಾಯೋಕ್ತಿಗಳನ್ನು ಪರ್ಯಾಲೋಚಿಸಿದ ತರುವಾಯ, ಪರಿಷತ್ತು, ಆ ಅಧ್ಯಯನ ಕೋರ್ಸ್ ಅಥವಾ ಪರೀಕ್ಷೆಯನ್ನು, ಸಂದರ್ಭಾನುಸಾರ, ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಪೂರ್ಣಗೊಳಿಸಿದಾಗ ಅಥವಾ ಅದರಲ್ಲಿ ಉತ್ತೀರ್ಣವಾದಾಗ ಮಾತ್ರ ಅದು ಅನುಮೋದಿತವಾಗಿರುವುದಾಗಿ ಭಾವಿಸತಕ್ಕುದು ಎಂಬುದಾಗಿ ಘೋಷಿಸಬಹುದು.

**14. ಯಾವ ಪ್ರದೇಶಗಳಿಗೆ ಈ ಅಧಿನಿಯಮವು ವ್ಯಾಪ್ತವಾಗುತ್ತದೋ ಆ ಪ್ರದೇಶಗಳ ಹೊರಗಡೆ ಮಂಜೂರು ಮಾಡಿದ ಅರ್ಹತೆಗಳು.–** ಈ ಅಧಿನಿಯಮವು ವ್ಯಾಪ್ತವಾಗುವಂಥ ಪ್ರದೇಶಗಳ ಹೊರಗಡೆ ಇರುವ ಪ್ರಾಧಿಕಾರವು ಔಷಧಗಾರಿಕೆಯಲ್ಲಿ ಕೊಟ್ಟ ಯಾವುದೇ ಅರ್ಹತೆಯು, ಅಗತ್ಯ ಕೌಶಲ್ಯ ಮತ್ತು ಜ್ಞಾನದ ಬಗ್ಗೆ ಸಾಕಷ್ಟು ಖಾತ್ರಿಯನ್ನು ಒದಗಿಸುತ್ತದೆ ಎಂದು ಕೇಂದ್ರ ಪರಿಷತ್ತಿಗೆ ಮನದಟ್ಟಾದರೆ, ಅದು ಅಂಥ ಅರ್ಹತೆಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿಗಾಗಿ ಅರ್ಹತೆ ಹೊಂದುವ ಉದ್ದೇಶಕ್ಕಾಗಿ ಅನುಮೋದಿತ ಅರ್ಹತೆಯಾಗಿರುವುದಾಗಿ ಘೋಷಿಸಬಹುದು ಮತ್ತು ಯಾವುದೇ ಕಾಲದಲ್ಲಿ ಅದಕ್ಕೆ ಸಾಕಷ್ಟೆಂದು ಕಂಡುಬರುವ ಕಾರಣಗಳಿಗಾಗಿ ಅಂಥ ಅರ್ಹತೆಯು ಕೇಂದ್ರ ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು ನಿರ್ದಿಷ್ಟಪಡಿಸಿದ ಒಂದು ದಿನಾಂಕಕ್ಕೆ ಮುಂಚೆ ಅಥವಾ ಆ ತರುವಾಯ ಕೊಟ್ಟಾಗ ಮಾತ್ರ ಅನುಮೋದಿತವಾಗಿರುವುದಾಗಿ ಭಾವಿಸತಕ್ಕದ್ದು ಎಂದು ಘೋಷಿಸಬಹುದು:

ಪರಂತು, ಯಾವ ರಾಜ್ಯ ಅಥವಾ ದೇಶದಲ್ಲಿ ಆ ಅರ್ಹತೆಯನ್ನು ಕೊಡಲಾಗಿದೆಯೋ ಆ ರಾಜ್ಯ ಅಥವಾ ದೇಶದ ಕಾನೂನು ಮತ್ತು ಆಚರಣೆಯ ಮೂಲಕ ಅಂಥ ಅರ್ಹತೆಯನ್ನು ಹೊಂದಿರುವ ಭಾರತೀಯ ಮೂಲದ ವ್ಯಕ್ತಿಗಳಿಗೆ ಔಷಧಗಾರಿಕೆಯ ವೃತ್ತಿಯನ್ನು ಪ್ರವೇಶಿಸಲು ಮತ್ತು ನಡೆಸಲು ಅನುಮತಿಸಲಾಗಿದ್ದ ಹೊರತು, ಅಂಥ ಅರ್ಹತೆಯನ್ನು ಹೊಂದಿರುವ ಭಾರತ ನಾಗರಿಕನಲ್ಲದ ಇತರ ಯಾವನೇ ವ್ಯಕ್ತಿಯನ್ನು, ಆ ನೋಂದಣಿಗಾಗಿ ಅರ್ಹನಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**15. ಘೋಷಣೆಗಳ ವಿಧಾನ.–** 12ನೇ ಪ್ರಕರಣ, 13ನೇ ಪ್ರಕರಣ ಅಥವಾ 14ನೇ ಪ್ರಕರಣದ ಮೇರೆಗಿನ ಎಲ್ಲಾ ಘೋಷಣೆಗಳನ್ನು ಕೇಂದ್ರ ಪರಿಷತ್ತಿನ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಮಾಡತಕ್ಕದ್ದು ಮತ್ತು ರಾಜಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ಕೂಡಲೇ ಅವು ಜಾರಿಗೆ ಬರತಕ್ಕದ್ದು.

**15ಎ. ಕೇಂದ್ರ ರಿಜಿಸ್ಟರು.–** (1) ಕೇಂದ್ರ ಪರಿಷತ್ತು, ಕೇಂದ್ರ ರಿಜಿಸ್ಟರು ಎಂದು ಕರೆಯಲಾಗುವ ಔಷಧ ತಯಾರಕರ ರಿಜಿಸ್ಟರನ್ನು ನಿಯಮಿಸಿದ ರೀತಿಯಲ್ಲಿ ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು; ಅದು, ರಾಜ್ಯ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನಮೂದಿಸಿರುವ ಎಲ್ಲಾ ವ್ಯಕ್ತಿಗಳ ಹೆಸರುಗಳನ್ನು ಒಳಗೊಂಡಿರತಕ್ಕದ್ದು.

(2) ಪ್ರತಿಯೊಂದು ರಾಜ್ಯ ಪರಿಷತ್ತು, ಪ್ರತಿವರ್ಷದ ಏಪ್ರಿಲ್ ಮೊದಲನೇ ದಿವಸದ ತರುವಾಯ ಆದಷ್ಟು ಬೇಗ ರಾಜ್ಯದ ರಿಜಿಸ್ಟರಿನ ಐದು ಪ್ರತಿಗಳನ್ನು ಕೇಂದ್ರ ಪರಿಷತ್ತಿಗೆ ಸರಬರಾಜು ಮಾಡತಕ್ಕದ್ದು, ಮತ್ತು ಪ್ರತಿಯೊಂದು ರಾಜ್ಯ ಪರಿಷತ್ತಿನ ರಿಜಿಸ್ಟ್ರಾರನು ವಿಳಂಬವಿಲ್ಲದೆ, ರಾಜ್ಯ ರಿಜಿಸ್ಟರಿನಲ್ಲಿ ಕಾಲಕಾಲಕ್ಕೆ ಮಾಡಿದ ಎಲ್ಲಾ ಸೇರ್ಪಡೆಗಳು ಮತ್ತು ಅದರಲ್ಲಿನ ಇತರೆ ತಿದ್ದುಪಡಿಗಳನ್ನು ಕೇಂದ್ರ ಪರಿಷತ್ತಿಗೆ ತಿಳಿಸತಕ್ಕದ್ದು.

(3) ಕೇಂದ್ರ ಪರಿಷತ್ತು ಮಾಡಿದ ಆದೇಶಗಳಿಗೆ ಅನುಸಾರವಾಗಿ ಕೇಂದ್ರ ರಿಜಿಸ್ಟರನ್ನು ಇಡುವುದು ಮತ್ತು ಕಾಲಕಾಲಕ್ಕೆ ಕೇಂದ್ರ ರಿಜಿಸ್ಟರನ್ನು ಪರಿಷ್ಕರಿಸುವುದು ಮತ್ತು ಅದನ್ನು ಭಾರತದ ರಾಜಪತ್ರದಲ್ಲಿ ಪ್ರಕಟಿಸುವುದು ಕೇಂದ್ರ ಪರಿಷತ್ತಿನ ರಿಜಿಸ್ಟ್ರಾರನ ಕರ್ತವ್ಯವಾಗಿರತಕ್ಕದ್ದು.

(4) ಕೇಂದ್ರ ರಿಜಿಸ್ಟರು, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1) ರ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ದಸ್ತಾವೇಜಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಭಾರತದ ರಾಜಪತ್ರದಲ್ಲಿ ಪ್ರಕಟವಾಗಿರುವಂತಹ ರಿಜಿಸ್ಟರಿನ ಪ್ರತಿಯನ್ನು ಹಾಜರುಪಡಿಸುವ ಮೂಲಕ ಅದನ್ನು ರುಜುವಾತು ಮಾಡಬಹುದು.

**15ಬಿ. ಕೇಂದ್ರ ರಿಜಿಸ್ಟರಿನಲ್ಲಿ ನೋಂದಣಿ:–** ಕೇಂದ್ರ ಪರಿಷತ್ತಿನ ರಿಜಿಸ್ಟ್ರಾರನು, ರಾಜ್ಯ ರಿಜಿಸ್ಟರಿನಲ್ಲಿನ ವ್ಯಕ್ತಿಯ ನೋಂದಣಿಯ ವರದಿಯನ್ನು ಸ್ವೀಕರಿಸಿದ ನಂತರ ಕೇಂದ್ರ ರಿಜಿಸ್ಟರ್‌ನಲ್ಲಿ ಅವನ ಹೆಸರನ್ನು ದಾಖಲು ಮಾಡತಕ್ಕದ್ದು.

**16. ಪರಿಶೀಲನೆ.**– (1) ಕಾರ್ಯನಿರ್ವಾಹಕ ಸಮಿತಿಯು, ಈ ಅಧ್ಯಾಯದ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಭಾವಿಸ ಬಹುದಾದಂಥ ಸಂಖ್ಯೆಯ ಪರಿಶೀಲಕರನ್ನು ನೇಮಕಮಾಡಬಹುದು.

(2) ಪರಿಶೀಲಕನು–

(ಎ) ಅನುಮೋದಿತ ಅಧ್ಯಯನ ಕೋರ್ಸನ್ನು ಒದಗಿಸುವ ಯಾವುದೇ ಸಂಸ್ಥೆಯನ್ನು ಪರಿಶೀಲಿಸಬಹುದು;

(ಬಿ) ಯಾವುದೇ ಅನುಮೋದಿತ ಪರೀಕ್ಷೆಯಲ್ಲಿ ಹಾಜರಿರಬಹುದು;

(ಸಿ) ಯಾವ ಸಂಸ್ಥೆಯ ಪ್ರಾಧಿಕಾರಿಗಳು ಈ ಅಧ್ಯಾಯದ ಮೇರೆಗೆ ಅದರ ಅಧ್ಯಯನ ಕೋರ್ಸು ಅಥವಾ ಪರೀಕ್ಷೆಯ ಅನುಮೋದನೆಗಾಗಿ ಅರ್ಜಿಯನ್ನು ಮಾಡಿಕೊಂಡಿರುವರೋ ಆ ಯಾವುದೇ ಸಂಸ್ಥೆಯನ್ನು ಪರಿಶೀಲಿಸಬಹುದು ಮತ್ತು ಈ ಅಧ್ಯಾಯದ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂತೆ ಯಾವುದೇ ಪರೀಕ್ಷೆಯಲ್ಲಿ ಅಥವಾ ಅಂಥ ಸಂಸ್ಥೆಯಲ್ಲಿ ಹಾಜರಿರಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಯಾವುವೇ ಪರೀಕ್ಷೆಯಲ್ಲಿ ಹಾಜರಾಗುವ ಪರಿಶೀಲಕನು ಆ ಪರೀಕ್ಷೆಯನ್ನು ನಡೆಸುವುದರಲ್ಲಿ ಹಸ್ತಕ್ಷೇಪ ಮಾಡತಕ್ಕುದಲ್ಲ. ಆದರೆ, ಅವನು ಹಾಜರಾಗುವ ಪ್ರತಿಯೊಂದು ಪರೀಕ್ಷೆಯ ಪರ್ಯಾಪ್ತತೆಯ ಬಗ್ಗೆ ಮತ್ತು ಯಾವ ವಿಷಯದ ಬಗ್ಗೆ ವರದಿ ಮಾಡಲು ಕಾರ್ಯನಿರ್ವಾಹಕ ಸಮಿತಿಯು ಅವನನ್ನು ಅಗತ್ಯಪಡಿಸಬಹುದೋ ಆ ಯಾವುದೇ ಇತರ ವಿಷಯದ ಬಗ್ಗೆ ಕಾರ್ಯನಿರ್ವಾಹಕ ಸಮಿತಿಗೆ ಅವನು ವರದಿ ಮಾಡತಕ್ಕುದು.

(4) ಕಾರ್ಯನಿರ್ವಾಹಕ ಸಮಿತಿಯು ಅಂಥ ಪ್ರತಿಯೊಂದು ವರದಿಯ ಪ್ರತಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅಥವಾ ಸಂಸ್ಥೆಗೆ ಕಳುಹಿಸಿಕೊಡತಕ್ಕುದು ಮತ್ತು ಸದರಿ ಪ್ರಾಧಿಕಾರ ಅಥವಾ ಶಿಕ್ಷಣ ಸಂಸ್ಥೆಯು ಆ ಬಗ್ಗೆ ಮಾಡಿರಬಹುದಾದಂಥ ಯಾವುದೇ ಟಿಪ್ಪಣಿಗಳೊಂದಿಗೆ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ಆ ಪ್ರಾಧಿಕಾರ ಅಥವಾ ಸಂಸ್ಥೆಯು ಇರುವಂಥ ರಾಜ್ಯ ಸರ್ಕಾರಕ್ಕೂ ಕಳುಹಿಸಿಕೊಡತಕ್ಕುದು.

**17. ಒದಗಿಸಬೇಕಾದ ಮಾಹಿತಿ.**– (1) ಕೇಂದ್ರ ಪರಿಷತ್ತು, ತನ್ನ ನಡವಳಿಕೆಯ ಸಂಕ್ಷಿಪ್ತ ದಾಖಲೆಗಳು ಮತ್ತು ಕಾರ್ಯನಿರ್ವಾಹಕ ಸಮಿತಿಯ ನಡವಳಿಕೆಯ ಸಂಕ್ಷಿಪ್ತ ದಾಖಲೆಗಳು ಮತ್ತು ಅದರ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕುದು.

(2) ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಈ ಪ್ರಕರಣದ ಮೇರೆಗೆ ಅಥವಾ 16ನೇ ಪ್ರಕರಣದ ಮೇರೆಗೆ ಅದಕ್ಕೆ ಒದಗಿಸಿದ ಯಾವುದೇ ವರದಿ ಅಥವಾ ಪ್ರತಿಯನ್ನು ಪ್ರಕಟಿಸಬಹುದು.

**17ಎ. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**– (1) ಕೇಂದ್ರ ಪರಿಷತ್ತು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ಹೊರಡಿಸಬಹುದಾದಂಥ ಸಾಮಾನ್ಯ ನಿರ್ದೇಶನಗಳಿಗೆ ಅನುಸಾರವಾಗಿ ಮತ್ತು ಅದು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಸರಿಯಾದ ಲೆಕ್ಕಪತ್ರಗಳು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ಇಡತಕ್ಕುದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಸಿದ್ಧಪಡಿಸತಕ್ಕುದು.

(2) ಕೇಂದ್ರ ಪರಿಷತ್ತಿನ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ವಾರ್ಷಿಕವಾಗಿ ಪರಿಶೋಧಿಸತಕ್ಕುದು ಮತ್ತು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಅವನು ಅಥವಾ ಹಾಗೆ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ವಹಿಸಿದ ಯಾವುದೇ ವೆಚ್ಚವನ್ನು ಕೇಂದ್ರ ಪರಿಷತ್ತು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ಸಂದಾಯಮಾಡತಕ್ಕುದು.

(3) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ಕೇಂದ್ರ ಪರಿಷತ್ತಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು, ಸರ್ಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷ ಅಧಿಕಾರಗಳು ಮತ್ತು ಅಧಿಕಾರವನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರತಕ್ಕುದು ಮತ್ತು ವಿಶೇಷವಾಗಿ ಅವನು ಲೆಕ್ಕಪತ್ರಗಳ ಪುಸ್ತಕಗಳು, ಸಂಬಂಧಪಟ್ಟ ವೋಚರ್‌ಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸಲು ತಗಾದೆ ಮಾಡುವ ಹಕ್ಕನ್ನು ಹೊಂದಿರತಕ್ಕುದು.

(4) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಪ್ರಮಾಣೀಕರಿಸಿದ ಕೇಂದ್ರ ಪರಿಷತ್ತಿನ ಲೆಕ್ಕಪತ್ರಗಳನ್ನು ಆ ಬಗ್ಗೆ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಕೇಂದ್ರ ಪರಿಷತ್ತಿಗೆ ವಾರ್ಷಿಕವಾಗಿ ಕಳುಹಿಸತಕ್ಕುದು; ಆ ಪರಿಷತ್ತು ತನ್ನ ಟಿಪ್ಪಣಿಗಳೊಂದಿಗೆ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕುದು.

**18. ವಿನಿಯಮಗಳ ರಚನಾಧಿಕಾರ.**- (1) ಕೇಂದ್ರ ಪರಿಷತ್ತು, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಈ ಅಧಿನಿಯಮಕ್ಕೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು-

(ಎ) ಕೇಂದ್ರ ಪರಿಷತ್ತಿನ ಸ್ವತ್ತಿನ ವ್ಯವಸ್ಥಾಪನೆ;

(ಬಿ) ಈ ಅಧ್ಯಾಯದ ಮೇರೆಗೆ ಚುನಾವಣೆಗಳನ್ನು ನಡೆಸಬೇಕಾದ ರೀತಿ;

(ಸಿ) ಕೇಂದ್ರ ಪರಿಷತ್ತಿನ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳನ್ನು ನಡೆಸತಕ್ಕ ಕಾಲಗಳು ಮತ್ತು ಸ್ಥಳಗಳು, ಅದರಲ್ಲಿನ ಕಾರ್ಯಕಲಾಪವನ್ನು ನಡೆಸುವುದು ಮತ್ತು ಕೋರಂಗೆ ಅವಶ್ಯವಾದ ಸದಸ್ಯರ ಸಂಖ್ಯೆ;

(ಡಿ) ಕಾರ್ಯನಿರ್ವಾಹಕ ಸಮಿತಿಯ ಪ್ರಕಾರ್ಯಗಳು, ಅದರ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳನ್ನು ನಡೆಸತಕ್ಕ ಕಾಲಗಳು ಮತ್ತು ಸ್ಥಳಗಳು ಮತ್ತು ಕೋರಂಗೆ ಅವಶ್ಯವಾದ ಸದಸ್ಯರ ಸಂಖ್ಯೆ;

(ಇ) ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಎಫ್) ರಿಜಿಸ್ಟ್ರಾರ್ ಅಥವಾ ಯಾವನೇ ಇತರ ಅಧಿಕಾರಿ ಅಥವಾ ನೌಕರನು ಒದಗಿಸಬೇಕಾದ ಭದ್ರತೆಯ ಮೊಬಲಗು ಮತ್ತು ಅದರ ಸ್ವರೂಪವನ್ನೊಳಗೊಂಡು, ಕೇಂದ್ರ ಪರಿಷತ್ತಿನ ರಿಜಿಸ್ಟ್ರಾರ್, ಕಾರ್ಯದರ್ಶಿ, ಪರಿಶೀಲಕರು ಮತ್ತು ಇತರೆ ಅಧಿಕಾರಿಗಳು ಮತ್ತು ನೌಕರರ ಅರ್ಹತೆಗಳು, ಪದಾವಧಿ ಮತ್ತು ಅಧಿಕಾರಗಳು ಮತ್ತು ಕರ್ತವ್ಯಗಳು;

(ಜಿ) ಕೇಂದ್ರ ರಿಜಿಸ್ಟರನ್ನು ಇಡಬೇಕಾದ ಮತ್ತು ಅದಕ್ಕೆ ಪ್ರಚಾರವನ್ನು ಕೊಡಬೇಕಾದ ರೀತಿ;

(ಹೆಚ್) ಕಾರ್ಯನಿರ್ವಾಹಕ ಸಮಿತಿಯನ್ನು ಹೊರತುಪಡಿಸಿ ಇತರ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳು, ಅವುಗಳ ಸಭೆಯನ್ನು ಕರೆಯುವುದು ಮತ್ತು ನಡೆಸುವುದು ಮತ್ತು ಅಂಥ ಸಭೆಗಳನ್ನು ನಡೆಸಬೇಕಾದ ಕಾಲ ಮತ್ತು ಸ್ಥಳ ಮತ್ತು ಕೋರಂಗೆ ಅವಶ್ಯವಾದ ಸದಸ್ಯರ ಸಂಖ್ಯೆ-

-ಇವುಗಳ ಬಗ್ಗೆ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ಕೇಂದ್ರ ಪರಿಷತ್ತು ವಿನಿಯಮಗಳನ್ನು ಮಾಡುವವರೆಗೆ, ಅಧ್ಯಕ್ಷನು, ಕೇಂದ್ರಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಕೇಂದ್ರ ಪರಿಷತ್ತಿಗೆ ಮೊದಲ ಚುನಾವಣೆಗಳನ್ನು ನಡೆಸಬೇಕಾದಂಥ ರೀತಿಯನ್ನು ಉಪಬಂಧಿಸುವುದನ್ನು ಒಳಗೊಂಡು ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ವಿನಿಯಮಗಳನ್ನು ಈ ಪ್ರಕರಣದ ಮೇರೆಗೆ ರಚಿಸಬಹುದು ಮತ್ತು ಹಾಗೆ ರಚಿಸಿದ ಯಾವುವೇ ವಿನಿಯಮಗಳನ್ನು ಈ ಪ್ರಕರಣದ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸಿ ಕೇಂದ್ರ ಪರಿಷತ್ತು ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

## ಅಧ್ಯಾಯ - III

## ರಾಜ್ಯ ಔಷಧಗಾರಿಕೆ ಪರಿಷತ್ತುಗಳು

**19. ರಾಜ್ಯ ಪರಿಷತ್ತುಗಳ ಸ್ಥಾಪನೆ ಮತ್ತು ರಚನೆ.**- 20ನೇ ಪ್ರಕರಣದ ಮೇರೆಗೆ ಮಾಡಿಕೊಂಡ ಒಪ್ಪಂದಕ್ಕೆ ಅನುಸಾರವಾಗಿ ಜಂಟಿ ರಾಜ್ಯ ಪರಿಷತ್ತನ್ನು ರಚಿಸಿರುವ ಹೊರತು, ರಾಜ್ಯಸರ್ಕಾರವು ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯ ಪರಿಷತ್ತನ್ನು ಸ್ಥಾಪಿಸತಕ್ಕುದು, ಎಂದರೆ:-

(ಎ) ರಾಜ್ಯದ ನೋಂದಾಯಿತ ಔಷಧ ತಯಾರಕರು ತಮ್ಮೊಳಗಿಂದ ಚುನಾಯಿಸಿದ ಆರು ಸದಸ್ಯರು;

(ಬಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐದು ಸದಸ್ಯರು, ಅದರ ಪೈಕಿ ಕೊನೇ ಪಕ್ಷ ಮೂವರು, ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನ ಶಾಸ್ತ್ರದಲ್ಲಿ ನಿಯಮಿಸಿದ ಪದವಿ ಅಥವಾ ಡಿಪ್ಲೊಮಾವನ್ನು ಹೊಂದಿರುವವರಾಗಿರತಕ್ಕುದು ಅಥವಾ ನೋಂದಾಯಿತ ಔಷಧ ತಯಾರಕರಾಗಿರತಕ್ಕುದು;

(ಸಿ) ಸಂದರ್ಭಾನುಸಾರ, ಪ್ರತಿಯೊಂದು ವೈದ್ಯಕೀಯ ಪರಿಷತ್ತಿನ ಅಥವಾ ರಾಜ್ಯದ ವೈದ್ಯಕೀಯ ನೋಂದಣಿ ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸಿದ ಒಬ್ಬ ಸದಸ್ಯ;

(ಡಿ) ರಾಜ್ಯದ ಮುಖ್ಯ ಆಡಳಿತಾತ್ಮಕ ವೈದ್ಯಾಧಿಕಾರಿ, ಪದನಿಮಿತ್ತ ಅಥವಾ ಅವನು ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಹಾಗೆ ಹಾಜರಾಗಲು ಅವನು ಬರಹದಲ್ಲಿ ಅಧಿಕೃತಗೊಳಿಸಿದ ವ್ಯಕ್ತಿ;

(ಡಿಡಿ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ 23)ರ ಮೇರೆಗೆ ರಾಜ್ಯದ ಔಷಧಗಳ ನಿಯಂತ್ರಣ ಸಂಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿ, ಪದನಿಮಿತ್ತ ಅಥವಾ ಅವನು ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಹಾಜರಾಗಲು ಅವನು ಬರಹದಲ್ಲಿ ಅಧಿಕೃತಗೊಳಿಸಿದ ವ್ಯಕ್ತಿ;

(ಇ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940 ರ 23)ರ ಮೇರೆಗೆ ಸರ್ಕಾರಿ ವಿಶ್ಲೇಷಕ, ಪದನಿಮಿತ್ತ ಅಥವಾ ಒಬ್ಬರಿಗಿಂತ ಹೆಚ್ಚು ಜನ ಇರುವಲ್ಲಿ ಈ ಬಗ್ಗೆ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಒಬ್ಬ ವ್ಯಕ್ತಿ:

ಪರಂತು, 20ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಒಪ್ಪಂದವನ್ನು ಮಾಡಿಕೊಂಡಿರುವಲ್ಲಿ, ಆ ಒಪ್ಪಂದವು ಆ ರಾಜ್ಯ ಪರಿಷತ್ತನ್ನು, ಭಾಗವಹಿಸುವ ಇತರ ರಾಜ್ಯಗಳ ಅವಶ್ಯಕತೆಗಳನ್ನು ಪೂರೈಸಲು ಇಬ್ಬರು ಸದಸ್ಯರಿಗಿಂತ ಹೆಚ್ಚಿಲ್ಲದಂತೆ ಹೆಚ್ಚಿಸತಕ್ಕುದೆಂದು ಉಪಬಂಧಿಸಬಹುದು; ಅವರ ಪೈಕಿ ಕನಿಷ್ಠ ಪಕ್ಷ ಒಬ್ಬನು ಯಾವಾಗಲೂ ಸದರಿ ಭಾಗವಹಿಸುವ ಇತರ ರಾಜ್ಯಗಳ ಪ್ರತಿಯೊಂದು ಸರ್ಕಾರವು ನಾಮನಿರ್ದೇಶಿಸಿದ ಹಾಗೂ ಔಷಧಗಾರಿಕೆಯಲ್ಲಿ ಅಥವಾ ಔಷಧ ತಯಾರಿಕಾ ರಸಾಯನಶಾಸ್ತ್ರದಲ್ಲಿ ನಿಯಮಿಸಿದ ಪದವಿ ಅಥವಾ ಡಿಪ್ಲೊಮಾವನ್ನು ಹೊಂದಿರುವ ವ್ಯಕ್ತಿ ಅಥವಾ ನೋಂದಾಯಿತ ಔಷಧ ತಯಾರಕನಾಗಿರತಕ್ಕುದು ಮತ್ತು ಆ ಒಪ್ಪಂದವು ಹಾಗೆ ಉಪಬಂಧಿಸಿರುವಲ್ಲಿ ಆ ರಾಜ್ಯ ಪರಿಷತ್ತಿನ ರಚನೆಯನ್ನು ತದನುಸಾರವಾಗಿ ಹೆಚ್ಚಿಸಲಾಗಿರುವುದಾಗಿ ಭಾವಿಸತಕ್ಕುದು.

**20. ಅಂತರ ರಾಜ್ಯ ಒಪ್ಪಂದಗಳು.**- (1) ಎರಡು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯಗಳು,-

(ಎ) ಭಾಗವಹಿಸುವ ಎಲ್ಲಾ ರಾಜ್ಯಗಳಿಗಾಗಿ ಒಂದು ಜಂಟಿ ರಾಜ್ಯ ಪರಿಷತ್ತನ್ನು ಸ್ಥಾಪಿಸುವುದಕ್ಕಾಗಿ; ಅಥವಾ

(ಬಿ) ಒಂದು ರಾಜ್ಯದ ರಾಜ್ಯಪರಿಷತ್ತು, ಇತರ ಭಾಗವಹಿಸುವ ರಾಜ್ಯಗಳ ಅವಶ್ಯಕತೆಗಳನ್ನು ಪೂರೈಸತಕ್ಕದ್ದೆಂದು

- ಉಪಬಂಧಿಸಲು, ಒಂದು ಒಪ್ಪಂದವನ್ನು, ಆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಅದು ಜಾರಿಯಲ್ಲಿರುವುದಕ್ಕಾಗಿ ಮತ್ತು ಅಂಥ ಹೆಚ್ಚಿನ ಅವಧಿಗಳಿಗಾಗಿ ಏನಾದರೂ ಇದ್ದರೆ, ಅದು ನವೀಕರಣಕ್ಕೆ ಒಳಪಡುವುದಕ್ಕಾಗಿ ಮಾಡಿಕೊಳ್ಳಬಹುದು.

(2) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾಗಿರುವಂಥ ವಿಷಯಗಳ ಜೊತೆಗೆ, ಈ ಪ್ರಕರಣದ ಮೇರೆಗಿನ ಒಪ್ಪಂದವು-

(ಎ) ರಾಜ್ಯ ಪರಿಷತ್ತು ಅಥವಾ ಜಂಟಿ ರಾಜ್ಯ ಪರಿಷತ್ತಿಗೆ ಸಂಬಂಧಿಸಿದಂತೆ ವೆಚ್ಚವನ್ನು ಭಾಗವಹಿಸುವ ರಾಜ್ಯಗಳ ನಡುವೆ ಹಂಚುವುದಕ್ಕಾಗಿ ಉಪಬಂಧಿಸಬಹುದು;

(ಬಿ) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದ ಹಲವಾರು ಪ್ರಕಾರ್ಯಗಳನ್ನು, ಭಾಗವಹಿಸುವ ರಾಜ್ಯ ಸರ್ಕಾರಗಳಲ್ಲಿ ಯಾವುದು ಚಲಾಯಿಸತಕ್ಕುದೆಂಬುದನ್ನು ನಿರ್ಧರಿಸಬಹುದು ಮತ್ತು ಈ ಅಧಿನಿಯಮದಲ್ಲಿ ರಾಜ್ಯ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕುದು;

(ಸಿ) ಈ ಅಧಿನಿಯಮದ ಮೇರೆಗೆ ಸಾಮಾನ್ಯವಾಗಿಯೇ ಆಗಲಿ ಅಥವಾ ಉದ್ಭವಿಸುವ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆಯೇ ಆಗಲಿ ಆ ಭಾಗವಹಿಸುವ ರಾಜ್ಯ ಸರ್ಕಾರಗಳ ನಡುವೆ ಸಮಾಲೋಚನೆಗಾಗಿ ಉಪಬಂಧಿಸಬಹುದು;

(ಡಿ) ಒಪ್ಪಂದವನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವೆಂದು ಭಾವಿಸಬಹುದಾದಂತೆ, ಈ ಅಧಿನಿಯಮಕ್ಕೆ ಅಸಂಗತವಾಗದಿರುವಂಥ ಪ್ರಾಸಂಗಿಕ ಅಥವಾ ಸಹಾಯಕ ಉಪಬಂಧಗಳನ್ನು ಮಾಡಬಹುದು.

(3) ಈ ಪ್ರಕರಣದ ಮೇರೆಗಿನ ಒಪ್ಪಂದವನ್ನು, ಭಾಗವಹಿಸುವ ರಾಜ್ಯಗಳ ರಾಜಪತ್ರಗಳಲ್ಲಿ ಪ್ರಕಟಿಸತಕ್ಕುದು.

**21. ಜಂಟಿ ರಾಜ್ಯ ಪರಿಷತ್ತುಗಳ ರಚನೆ.**- (1) ಜಂಟಿ ರಾಜ್ಯ ಪರಿಷತ್ತು, ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಿರತಕ್ಕುದು, ಎಂದರೆ:-

(ಎ) ಭಾಗವಹಿಸುವ ಪ್ರತಿಯೊಂದು ರಾಜ್ಯದ ನೋಂದಾಯಿತ ಔಷಧ ತಯಾರಕರು ತಮ್ಮೊಳಗಿಂದ ಚುನಾಯಿಸಿದ, ಆ ಒಪ್ಪಂದವು ಉಪಬಂಧಿಸುವಂತೆ ಮೂರಕ್ಕಿಂತ ಕಡಿಮೆ ಇಲ್ಲದ ಮತ್ತು ಐದಕ್ಕಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರು;

(ಬಿ) ಭಾಗವಹಿಸುವ ಪ್ರತಿಯೊಂದು ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ, ಆ ಒಪ್ಪಂದವು ಉಪಬಂಧಿಸುವಂತೆ ಎರಡಕ್ಕಿಂತ ಕಡಿಮೆ ಇಲ್ಲದ ಮತ್ತು ನಾಲ್ಕಕ್ಕಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರು;

(ಸಿ) ಸಂದರ್ಭಾನುಸಾರ, ಭಾಗವಹಿಸುವ ಪ್ರತಿಯೊಂದು ರಾಜ್ಯದ ಪ್ರತಿಯೊಂದು ವೈದ್ಯಕೀಯ ಪರಿಷತ್ತು ಅಥವಾ ವೈದ್ಯಕೀಯ ನೋಂದಣಿ ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸಿದ ಒಬ್ಬ ಸದಸ್ಯ;

(ಡಿ) ಭಾಗವಹಿಸುವ ಪ್ರತಿಯೊಂದು ರಾಜ್ಯದ ಮುಖ್ಯ ಆಡಳಿತಾತ್ಮಕ ವೈದ್ಯಾಧಿಕಾರಿ, ಪದನಿಮಿತ್ತ, ಅಥವಾ ಅವನು ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಹಾಗೆ ಹಾಜರಾಗಲು ಅವನು ಬರಹದಲ್ಲಿ ಅಧಿಕೃತಗೊಳಿಸಿದ ಒಬ್ಬ ವ್ಯಕ್ತಿ:

(ಡಿಡಿ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ 23)ರ ಮೇರೆಗೆ ಭಾಗವಹಿಸುವ ಪ್ರತಿಯೊಂದು ರಾಜ್ಯದ ಔಷಧಗಳ ನಿಯಂತ್ರಣ ಸಂಸ್ಥೆಯ ಪ್ರಭಾರದಲ್ಲಿರುವ ಅಧಿಕಾರಿ, ಪದನಿಮಿತ್ತ, ಅಥವಾ ಅವನು ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾಗಿದ್ದರೆ ಹಾಗೆ ಹಾಜರಾಗಲು ಅವನು ಬರಹದಲ್ಲಿ ಅಧಿಕೃತಗೊಳಿಸಿದ ಒಬ್ಬ ವ್ಯಕ್ತಿ;

(ಇ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ 23) ರ ಮೇರೆಗೆ ಭಾಗವಹಿಸುವ ಪ್ರತಿಯೊಂದು ರಾಜ್ಯದ ಸರ್ಕಾರಿ ವಿಶ್ಲೇಷಕ, ಪದನಿಮಿತ್ತ ಅಥವಾ ಅಂಥ ಯಾವುದೇ ರಾಜ್ಯದಲ್ಲಿ ಒಬ್ಬನಿಗಿಂತ ಹೆಚ್ಚು ವಿಶ್ಲೇಷಕರುಗಳಿರುವಲ್ಲಿ ಆ ಬಗ್ಗೆ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಒಬ್ಬರು.

(2) ಆ ಒಪ್ಪಂದವು (1)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪರಿಮಿತಿಗಳೊಳಗೆ ಆ ಖಂಡಗಳ ಮೇರೆಗೆ ಚುನಾಯಿತರಾಗಬೇಕಾದ ಅಥವಾ ನಾಮನಿರ್ದೇಶನಗೊಳ್ಳಬೇಕಾದ ಸದಸ್ಯರ ಸಂಖ್ಯೆಯು ಭಾಗವಹಿಸುವ ಪ್ರತಿಯೊಂದು ರಾಜ್ಯಕ್ಕೆ ಸಂಬಂಧಿಸಿದಂತೆ ಒಂದೇ ಆಗಿರಬಹುದು ಅಥವಾ ಆಗಿಲ್ಲದೆ ಇರಬಹುದು.

(3) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಪ್ರತಿಯೊಂದು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಸದಸ್ಯರ ಪೈಕಿ ಅರ್ಧಕ್ಕಿಂತ ಹೆಚ್ಚು ವ್ಯಕ್ತಿಗಳು ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನ ಶಾಸ್ತ್ರದಲ್ಲಿ ನಿಯಮಿಸಿದ ಪದವಿ ಅಥವಾ ಡಿಪ್ಲೊಮಾವನ್ನು ಹೊಂದಿರುವವರಾಗಿರತಕ್ಕುದು ಅಥವಾ ನೋಂದಾಯಿತ ಔಷಧ ತಯಾರಕರಾಗಿರತಕ್ಕುದು.

**22. ರಾಜ್ಯ ಪರಿಷತ್ತುಗಳ ನಿಗಮನ.**- ಪ್ರತಿಯೊಂದು ರಾಜ್ಯ ಪರಿಷತ್ತು, ರಾಜಪತ್ರದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಅಥವಾ ಜಂಟಿ ರಾಜ್ಯ ಪರಿಷತ್ತಿನ ಸಂದರ್ಭದಲ್ಲಿ, ಒಪ್ಪಂದದಲ್ಲಿ ನಿರ್ಧರಿಸಬಹುದಾದಂಥ ಹೆಸರಿನ ಮೂಲಕ ಚರ ಮತ್ತು ಸ್ಥಿರ ಸ್ವತ್ತು ಇವೆರಡನ್ನೂ ಆರ್ಜಿಸುವ ಅಥವಾ ಧಾರಣ ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

**23.ರಾಜ್ಯ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ.-** (1) ರಾಜ್ಯ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಸದಸ್ಯರು ತಮ್ಮೊಳಗಿಂದ ಚುನಾಯಿಸತಕ್ಕದು:

ಪರಂತು, ರಾಜ್ಯ ಪರಿಷತ್ತನ್ನು ಮೊದಲು ಸ್ಥಾಪಿಸಿದಂದಿನಿಂದ ಐದು ವರ್ಷಗಳವರೆಗೆ ಅಧ್ಯಕ್ಷನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ವ್ಯಕ್ತಿಯಾಗಿರತಕ್ಕದು; ಅವನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಆ ಪದವನ್ನು ಧಾರಣ ಮಾಡತಕ್ಕದು ಮತ್ತು ಅವನು ಈಗಾಗಲೇ ಸದಸ್ಯನಾಗಿಲ್ಲದೇ ಇರುವಲ್ಲಿ ಸಂದರ್ಭಾನುಸಾರ 19ನೇ ಪ್ರಕರಣ ಅಥವಾ 21ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಸದಸ್ಯರ ಜೊತೆಗೆ ರಾಜ್ಯ ಪರಿಷತ್ತಿನ ಸದಸ್ಯನಾಗತಕ್ಕದು.

(2) ಅಧ್ಯಕ್ಷ ಅಥವಾ ಉಪಾಧ್ಯಕ್ಷನು, ಹಾಗೆ, ಐದು ವರ್ಷಗಳನ್ನು ಮೀರದ ಮತ್ತು ರಾಜ್ಯ ಪರಿಷತ್ತಿನ ಸದಸ್ಯನಾಗಿ ತನ್ನ ಅವಧಿಯು ಮುಕ್ತಾಯಗೊಂಡ ಮೇಲೆ ವಿಸ್ತರಿಸದೆ ಇರುವಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದು; ಆದರೆ ಅವನು ರಾಜ್ಯ ಪರಿಷತ್ತಿನ ಸದಸ್ಯನಾಗಿರುವುದಕ್ಕೊಳಪಟ್ಟು ಮರು ಚುನಾವಣೆಗಾಗಿ ಅರ್ಹನಾಗಿರತಕ್ಕದು:

ಪರಂತು, ಯಾವ ಪೂರ್ಣ ಅವಧಿಯವರೆಗೆ ಅವನನ್ನು ಅಧ್ಯಕ್ಷ ಅಥವಾ ಉಪಾಧ್ಯಕ್ಷನೆಂದು ಚುನಾಯಿಸಲಾಗಿದೆಯೋ ಆ ಪೂರ್ಣ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ಪರಿಷತ್ತಿನ ಸದಸ್ಯನಾಗಿ ಅವನ ಪದಾವಧಿಯು ಮುಕ್ತಾಯವಾದರೆ, ಆದರೆ, ರಾಜ್ಯ ಪರಿಷತ್ತಿನ ಸದಸ್ಯನೆಂದು ಅವನು ಪುನಃ ಚುನಾಯಿತನಾದರೆ ಅಥವಾ ಪುನಃ ನಾಮನಿರ್ದೇಶನಗೊಂಡರೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಯಾವ ಪೂರ್ಣ ಅವಧಿಯವರೆಗೆ ಅವನು ಚುನಾಯಿತನಾಗಿದ್ದನೋ ಆ ಪೂರ್ಣ ಅವಧಿಯವರೆಗೆ ಪದಧಾರಣ ಮಾಡಿರುವುದು ಮುಂದುವರೆಯತಕ್ಕದು.

**24.ಚುನಾವಣೆಗಳ ವಿಧಾನ.-** ಈ ಅಧ್ಯಾಯದ ಮೇರೆಗಿನ ಚುನಾವಣೆಗಳನ್ನು ನಿಯಮಿಸಿದ ರೀತಿಯಲ್ಲಿ ನಡೆಸತಕ್ಕದು ಮತ್ತು ಅಂಥ ಯಾವುದೇ ಚುನಾವಣೆಯ ಬಗ್ಗೆ ಯಾವುದೇ ವಿವಾದವು ಉದ್ಭವಿಸುವಲ್ಲಿ, ಅದನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದು; ಅದರ ತೀರ್ಮಾನವು ಅಂತಿಮವಾಗಿರತಕ್ಕದು.

**25.ಪದಾವಧಿ ಮತ್ತು ಆಕಸ್ಮಿಕ ಖಾಲಿಸ್ಥಾನಗಳು.-** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ನಾಮನಿರ್ದೇಶಿತನಾದ ಅಧ್ಯಕ್ಷನನ್ನು ಹೊರತುಪಡಿಸಿ, ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಸದಸ್ಯನು, ಅವನ ನಾಮನಿರ್ದೇಶನ ಅಥವಾ ಚುನಾವಣೆಯ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯು ಕ್ರಮಬದ್ಧವಾಗಿ ನಾಮ ನಿರ್ದೇಶಿತನಾಗುವವರೆಗೆ ಅಥವಾ ಚುನಾಯಿತನಾಗುವವರೆಗೆ-ಇವುಗಳಲ್ಲಿ ಯಾವುದು ಹೆಚ್ಚಿನದೋ ಆ ಅವಧಿಯವರೆಗೆ ಪದಧಾರಣ ಮಾಡತಕ್ಕದು.

(2) ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಸದಸ್ಯನು ಯಾವುದೇ ಕಾಲದಲ್ಲಿ ತಾನು ರುಜು ಮಾಡಿ ಅಧ್ಯಕ್ಷನಿಗೆ ಸಂಬೋಧಿಸಿ ಬರವಣಿಗೆಯ ಮೂಲಕ ಅವನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಅಂಥ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದು.

(3) ನಾಮನಿರ್ದೇಶಿತ ಅಥವಾ ಚುನಾಯಿತ ಸದಸ್ಯನು ರಾಜ್ಯ ಪರಿಷತ್ತಿನ ಮೂರು ಕ್ರಮಾನುಗತ ಸಭೆಗಳಿಗೆ ರಾಜ್ಯ ಪರಿಷತ್ತಿನ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ ಗೈರುಹಾಜರಾದರೆ ಅಥವಾ ಅವನು 19 ಅಥವಾ 21ನೇ ಪ್ರಕರಣದ (ಎ) ಅಥವಾ (ಸಿ) ಖಂಡದ ಮೇರೆಗೆ ಚುನಾಯಿತನಾದರೆ, ಸಂದರ್ಭಾನುಸಾರ, ಅವನು ನೋಂದಾಯಿತ ಔಷಧ ತಯಾರಕನಾಗಿರುವುದು ನಿಂತುಹೋದರೆ ಅಥವಾ ವೈದ್ಯಕೀಯ ಪರಿಷತ್ತು ಅಥವಾ ರಾಜ್ಯದ ವೈದ್ಯಕೀಯ ನೋಂದಣಿ ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋದರೆ, ಅವನ ಸ್ಥಾನವು ಖಾಲಿಯಾಗಿರುವುದಾಗಿ ಭಾವಿಸತಕ್ಕದು.

(4) ರಾಜ್ಯ ಪರಿಷತ್ತಿನಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು, ಸಂದರ್ಭಾನುಸಾರ, ಹೊಸ ನಾಮನಿರ್ದೇಶನದ ಅಥವಾ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದು ಮತ್ತು ಆ ಖಾಲಿ ಸ್ಥಾನವನ್ನು

ಭರ್ತಿಮಾಡಲು ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ವ್ಯಕ್ತಿಯು ಯಾವ ಸದಸ್ಯನ ಸ್ಥಾನಕ್ಕೆ ಅವನು ನಾಮನಿರ್ದೇಶಿತನಾಗಿದ್ದಾನೋ ಅಥವಾ ಚುನಾಯಿತನಾಗಿದ್ದಾನೋ ಆ ಸದಸ್ಯನ ಉಳಿದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕುದು.

(5) ರಾಜ್ಯ ಪರಿಷತ್ತು ಮಾಡಿದ ಯಾವುದೇ ಕಾರ್ಯವನ್ನು ಆ ರಾಜ್ಯ ಪರಿಷತ್ತಿನಲ್ಲಿ ಯಾವುದೇ ಖಾಲಿ ಸ್ಥಾನವಿತ್ತೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿತ್ತೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

(6) ರಾಜ್ಯ ಪರಿಷತ್ತಿನ ಸದಸ್ಯರು ಮರು ನಾಮನಿರ್ದೇಶನಕ್ಕೆ ಅಥವಾ ಮರು ಚುನಾವಣೆಗೆ ಅರ್ಹರಾಗಿರತಕ್ಕುದು.

**26.ಸಿಬ್ಬಂದಿ, ಪರಿಶ್ರಮಧನ ಮತ್ತು ಭತ್ಯೆಗಳು.**– ರಾಜ್ಯ ಪರಿಷತ್ತು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ,–

(ಎ) ರಿಜಿಸ್ಟ್ರಾರ್‌ನನ್ನು ನೇಮಕ ಮಾಡಬಹುದು; ಅವನು ಕಾರ್ಯದರ್ಶಿ ಮತ್ತು ರಾಜ್ಯ ಪರಿಷತ್ತು ಹಾಗೆ ತೀರ್ಮಾನಿಸಿದರೆ ರಾಜ್ಯ ಪರಿಷತ್ತಿನ ಖಜಾಂಚಿಯಾಗಿಯೂ ಸಹ ಕಾರ್ಯನಿರ್ವಹಿಸತಕ್ಕುದು;

(ಬಿ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಪರಿಷತ್ತಿಗೆ ಸಾಧ್ಯವಾಗುವಂತೆ ಮಾಡಲು ಅವಶ್ಯವಾಗಬಹುದಾದಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡಬಹುದು;

(ಸಿ) ರಾಜ್ಯ ಪರಿಷತ್ತಿನ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳ ಹಾಗೂ ನೌಕರರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಇತರೆ ಸೇವಾಷರತ್ತುಗಳನ್ನು ನಿಗದಿ ಪಡಿಸಬಹುದು;

(ಡಿ) ರಾಜ್ಯ ಪರಿಷತ್ತಿನ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳ ದರಗಳನ್ನು ನಿಗದಿಪಡಿಸಬಹುದು:

ಪರಂತು, ರಾಜ್ಯ ಪರಿಷತ್ತು ಮೊದಲು ಸ್ಥಾಪನೆಯಾದಂದಿನಿಂದ ಮೊದಲ ನಾಲ್ಕು ವರ್ಷಗಳವರೆಗೆ ರಿಜಿಸ್ಟ್ರಾರನು ರಾಜ್ಯ ಸರ್ಕಾರವು ನೇಮಕ ಮಾಡಿದ ವ್ಯಕ್ತಿಯಾಗಿರತಕ್ಕುದು. ಅವನು ರಾಜ್ಯಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕುದು.

**26ಎ. ಪರಿಶೀಲನೆ.**– (1) ರಾಜ್ಯ ಪರಿಷತ್ತು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ III, IV ಮತ್ತು Vನೇ ಅಧ್ಯಾಯಗಳ ಉದ್ದೇಶಗಳಿಗಾಗಿ ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ಪರಿಶೀಲಕರನ್ನು ನೇಮಕಮಾಡಬಹುದು.

(2) ಪರಿಶೀಲಕನು,–

(ಎ) ಯಾವ ಆವರಣದಲ್ಲಿ ಔಷಧಿಗಳನ್ನು ಮಿಶ್ರಣ ಮಾಡಲಾಗುತ್ತಿದೆಯೋ ಅಥವಾ ತಯಾರಿಸಿಕೊಡಲಾಗುತ್ತಿದೆಯೋ ಆ ಯಾವುದೇ ಆವರಣವನ್ನು ಪರಿಶೀಲಿಸಬಹುದು ಮತ್ತು ರಿಜಿಸ್ಟ್ರಾರನಿಗೆ ಲಿಖಿತ ವರದಿಯನ್ನು ಒಪ್ಪಿಸಬಹುದು;

(ಬಿ) ಔಷಧಗಳ ಮಿಶ್ರಣ ಮಾಡುವುದರಲ್ಲಿ ಅಥವಾ ಅವುಗಳನ್ನು ತಯಾರಿಸಿ ಕೊಡುವುದರಲ್ಲಿ ತೊಡಗಿರುವ ವ್ಯಕ್ತಿಯು ನೋಂದಾಯಿತ ಔಷಧ ತಯಾರಕನಾಗಿರುವನೋ ಹೇಗೆ ಎಂಬ ಬಗ್ಗೆ ವಿಚಾರಣೆ ಮಾಡಬಹುದು;

(ಸಿ) ಈ ಅಧಿನಿಯಮದ ಯಾವುದೇ ಉಲ್ಲಂಘನೆಗೆ ಸಂಬಂಧಿಸಿದಂತೆ ಬರಹದಲ್ಲಿ ಮಾಡಿದ ಯಾವುದೇ ದೂರಿನ ಬಗ್ಗೆ ತನಿಖೆ ಮಾಡಬಹುದು ಮತ್ತು ರಿಜಿಸ್ಟ್ರಾರನಿಗೆ ವರದಿ ಮಾಡಬಹುದು;

(ಡಿ) ರಾಜ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಆದೇಶದ ಮೇರೆಗೆ ಪ್ರಾಸಿಕ್ಯೂಷನನ್ನು ಹೂಡಬಹುದು;

(ಇ) ಈ ಅಧಿನಿಯಮದ III, IV ಮತ್ತು Vನೇ ಅಧ್ಯಾಯಗಳ ಅಥವಾ ಅವುಗಳ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗ ಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(3) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮೂಲಕ ಅಥವಾ ಮೇರೆಗೆ ಪರಿಶೀಲಕನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವಾಗ ಉದ್ದೇಶಪೂರ್ವಕವಾಗಿ ಅವನಿಗೆ ಅಡ್ಡಿಪಡಿಸುವ ಯಾವನೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(4) ಪ್ರತಿಯೊಬ್ಬ ಪರಿಶೀಲಕನನ್ನು, ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರನೆಂಬುದಾಗಿ ಭಾವಿಸತಕ್ಕದು.

**27.ಕಾರ್ಯನಿರ್ವಾಹಕ ಸಮಿತಿ.–** (1) ರಾಜ್ಯ ಪರಿಷತ್ತು, ಆದಷ್ಟು ಬೇಗ, ಅಧ್ಯಕ್ಷ (ಕಾರ್ಯನಿರ್ವಾಹಕ ಸಮಿತಿಯ ಸಭಾಪತಿಯಾಗಿರತಕ್ಕವನು) ಮತ್ತು ಉಪಾಧ್ಯಕ್ಷ, ಪದನಿಮಿತ್ತ ಮತ್ತು ತಮ್ಮೊಳಗಿಂದ ರಾಜ್ಯ ಪರಿಷತ್ತು ಚುನಾಯಿಸಿದ, ನಿಯಮಿಸಬಹುದಾದಷ್ಟು ಸಂಖ್ಯೆಯ, ಇತರ ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕದು.

(2) ಕಾರ್ಯನಿರ್ವಾಹಕ ಸಮಿತಿಯ ಸದಸ್ಯನು ರಾಜ್ಯ ಪರಿಷತ್ತಿನ ಸದಸ್ಯನಾಗಿ ಅವನ ಪದಾವಧಿಯು ಮುಕ್ತಾಯವಾಗುವವರೆಗೆ ಪದಧಾರಣ ಮಾಡತಕ್ಕದು; ಆದರೆ, ಅವನು ರಾಜ್ಯ ಪರಿಷತ್ತಿನ ಸದಸ್ಯನಾಗಿರುವುದಕ್ಕೊಳಪಟ್ಟು ಅವನು ಮರುಚುನಾವಣೆಗೆ ಅರ್ಹನಾಗಿರತಕ್ಕದು.

(3) ಈ ಅಧಿನಿಯಮದ ಮೂಲಕ ತನಗೆ ಪ್ರದಾನ ಮಾಡಿದ ಮತ್ತು ವಿಧಿಸಿದ ಅಧಿಕಾರಗಳು ಮತ್ತು ಕರ್ತವ್ಯಗಳ ಜೊತೆಗೆ, ಕಾರ್ಯನಿರ್ವಾಹಕ ಸಮಿತಿಯು ನಿಯಮಿಸಬಹುದಾದಂಥ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದು ಮತ್ತು ನಿರ್ವಹಿಸತಕ್ಕದು.

**28.ಒದಗಿಸಬೇಕಾದ ಮಾಹಿತಿ.–** (1) ರಾಜ್ಯ ಪರಿಷತ್ತು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳು, ಅದರ ನಡವಳಿಕೆಯ ಸಂಕ್ಷಿಪ್ತ ದಾಖಲೆಗಳ ಮತ್ತು ಕಾರ್ಯನಿರ್ವಾಹಕ ಸಮಿತಿಯ ನಡವಳಿಕೆಯ ಸಂಕ್ಷಿಪ್ತ ದಾಖಲೆಗಳ ಪ್ರತಿಗಳು ಮತ್ತು ಅದರ ಲೆಕ್ಕಪತ್ರಗಳ ಉದ್ಧೃತಿಗಳನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದು ಮತ್ತು ಅವುಗಳ ಪ್ರತಿಗಳನ್ನು ಕೇಂದ್ರ ಪರಿಷತ್ತಿಗೆ ಕಳುಹಿಸತಕ್ಕದು.

(2) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಈ ಪ್ರಕರಣದ ಮೇರೆಗೆ ತನಗೆ ಒದಗಿಸಿದ ಯಾವುದೇ ವರದಿ, ಪ್ರತಿ, ಉದ್ಧೃತಿ ಅಥವಾ ಇತರೆ ಮಾಹಿತಿಯನ್ನು ಪ್ರಕಟಿಸಬಹುದು.

## ಅಧ್ಯಾಯ - IV

### ಔಷಧ ತಯಾರಕರ ನೋಂದಣಿ

**29.ರಿಜಿಸ್ಟರುಗಳ ತಯಾರಿಕೆ ಮತ್ತು ನಿರ್ವಹಣೆ.**- (1) ಯಾವುದೇ ರಾಜ್ಯದಲ್ಲಿ ಈ ಅಧ್ಯಾಯವು ಜಾರಿಗೆ ಬಂದ ತರುವಾಯ ಆದಷ್ಟು ಬೇಗ, ರಾಜ್ಯ ಸರ್ಕಾರವು, ರಾಜ್ಯಕ್ಕಾಗಿ ಒಂದು ಔಷಧ ತಯಾರಕರ ರಿಜಿಸ್ಟರನ್ನು ಇಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ತಯಾರಿಸುವಂತೆ ಮಾಡತಕ್ಕುದು.

(2) ರಾಜ್ಯ ಪರಿಷತ್ತು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ರಿಜಿಸ್ಟರನ್ನು ಇಡುವ ಕರ್ತವ್ಯವನ್ನು ವಹಿಸಿಕೊಳ್ಳತಕ್ಕುದು.

(3) ರಿಜಿಸ್ಟರು, ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ನೋಂದಾಯಿತ ವ್ಯಕ್ತಿಯ ಪೂರ್ಣ ಹೆಸರು ಮತ್ತು ಮನೆ ವಿಳಾಸ;

(ಬಿ) ರಿಜಿಸ್ಟರಿನಲ್ಲಿ ಅವನನ್ನು ಮೊದಲು ಸೇರಿಸಿಕೊಂಡ ದಿನಾಂಕ;

(ಸಿ) ನೋಂದಣಿಗಾಗಿ ಅವನ ಅರ್ಹತೆಗಳು;

(ಡಿ) ಅವನ ವೃತ್ತಿಯ ವಿಳಾಸ ಮತ್ತು ಯಾವನೇ ವ್ಯಕ್ತಿಯು ಅವನನ್ನು ನಿಯೋಜಿಸಿಕೊಂಡಿದ್ದರೆ ಅಂಥ ವ್ಯಕ್ತಿಯ ಹೆಸರು;

(ಇ) ನಿಯಮಿಸಬಹುದಾದಂಥ ಹೆಚ್ಚಿನ ವಿವರಗಳು.

**30.ಮೊದಲನೇ ರಿಜಿಸ್ಟರಿನ ತಯಾರಿಕೆ.**- (1) ಮೊದಲನೇ ರಿಜಿಸ್ಟರನ್ನು ತಯಾರಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮೂವರು ವ್ಯಕ್ತಿಗಳನ್ನೊಳಗೊಂಡ ನೋಂದಣಿ ನ್ಯಾಯಾಧಿಕರಣವನ್ನು ರಚಿಸತಕ್ಕುದು ಮತ್ತು ಆ ನೋಂದಣಿ ನ್ಯಾಯಾಧಿಕರಣದ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸತಕ್ಕ ರಿಜಿಸ್ಟ್ರಾರನನ್ನು ಸಹ ನೇಮಕ ಮಾಡತಕ್ಕುದು.

(2) ರಾಜ್ಯ ಸರ್ಕಾರವು, ಒಂದೇ ಅಥವಾ ಅದೇ ರೀತಿಯ ಅಧಿಸೂಚನೆಯ ಮೂಲಕ, ನಿಯಮಿಸಿದ ಫೀಜಿನೊಂದಿಗೆ ಇರತಕ್ಕಂಥ ನೋಂದಣಿಗಾಗಿನ ಅರ್ಜಿಗಳನ್ನು ಯಾವ ದಿನಾಂಕದಂದು ಅಥವಾ ಯಾವ ದಿನಾಂಕಕ್ಕೆ ಮುಂಚೆ ನೋಂದಣಿ ನ್ಯಾಯಾಧಿಕರಣಕ್ಕೆ ಮಾಡಿಕೊಳ್ಳತಕ್ಕುದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕುದು.

(3) ನೋಂದಣಿ ನ್ಯಾಯಾಧಿಕರಣವು, ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು ಪರೀಕ್ಷಿಸತಕ್ಕುದು ಮತ್ತು 31ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಆ ಅರ್ಜಿದಾರನು ಅರ್ಹನಾಗಿದ್ದಾನೆಂದು ಅದಕ್ಕೆ ಮನದಟ್ಟಾದರೆ ಆ ಅರ್ಜಿದಾರನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದು ಮಾಡುವಂತೆ ನಿರ್ದೇಶಿಸತಕ್ಕುದು.

(4) ಹಾಗೆ ತಯಾರಿಸಿದ ಮೊದಲನೇ ರಿಜಿಸ್ಟರನ್ನು, ಆ ತರುವಾಯ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕುದು ಮತ್ತು ಹಾಗೆ ಪ್ರಕಟಿಸಲಾದ ರಿಜಿಸ್ಟರಿನಲ್ಲಿ ವ್ಯಕ್ತವಾಗಿ ಅಥವಾ ಇಂಗಿತವಾಗಿ ನೋಂದಣಿ ನ್ಯಾಯಾಧಿಕರಣದ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಪ್ರಕಟಣೆಯ ದಿನಾಂಕದಿಂದ ಅರವತ್ತು ದಿವಸಗಳೊಳಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಆ ರಾಜ್ಯ ಸರ್ಕಾರವು ನೇಮಕ ಮಾಡಿದ ಪ್ರಾಧಿಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

(5) ರಿಜಿಸ್ಟ್ರಾರನು, (4)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ತೀರ್ಮಾನಕ್ಕೆ ಅನುಸಾರವಾಗಿ ರಿಜಿಸ್ಟರನ್ನು ತಿದ್ದುಪಡಿಮಾಡತಕ್ಕುದು ಮತ್ತು ಆ ತರುವಾಯ ಯಾರ

ಹೆಸರನ್ನು ಆ ರಿಜಿಸ್ಟರಿನಲ್ಲಿ ನಮೂದಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ಕೊಡತಕ್ಕುದು.

(6) ರಾಜ್ಯ ಪರಿಷತ್ತನ್ನು ರಚಿಸಿದ ಮೇಲೆ, ಆ ರಿಜಿಸ್ಟರನ್ನು ಅದರ ಅಭಿರಕ್ಷೆಗೆ ಕೊಡತಕ್ಕುದು ಮತ್ತು ರಾಜ್ಯ ಸರ್ಕಾರವು ಮೊದಲನೇ ರಿಜಿಸ್ಟರಿನಲ್ಲಿ ನೋಂದಣಿಗಾಗಿನ ಎಲ್ಲಾ ಅರ್ಜಿ ಫೀಜನ್ನು ಅಥವಾ ಅದರ ಯಾವುದೇ ನಿರ್ದಿಷ್ಟಪಡಿಸಿದ ಭಾಗವನ್ನು ರಾಜ್ಯಪರಿಷತ್ತಿನ ಜಮೆಗೆ ಸಂದಾಯಮಾಡತಕ್ಕುದೆಂದು ನಿರ್ದೇಶಿಸಬಹುದು.

**31. ಮೊದಲನೇ ರಿಜಿಸ್ಟರಿನಲ್ಲಿ ನಮೂದು ಮಾಡುವುದಕ್ಕಾಗಿ ಅರ್ಹತೆಗಳು.**- (1) ಹದಿನೆಂಟು ವರ್ಷಗಳ ವಯಸ್ಸು ತುಂಬಿರುವ ವ್ಯಕ್ತಿಯು, ಅವನು ಆ ರಾಜ್ಯದಲ್ಲಿ ವಾಸ ಮಾಡುತ್ತಿದ್ದರೆ ಅಥವಾ ಔಷಧಗಾರಿಕೆ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿದ್ದರೆ ಮತ್ತು ಅವನು-

(ಎ) ಔಷಧಗಾರಿಕೆ ಮತ್ತು ಔಷಧ ತಯಾರಿಕಾ ರಸಾಯನ ಶಾಸ್ತ್ರದಲ್ಲಿ ಪದವಿ ಅಥವಾ ಡಿಪ್ಲೊಮಾ ಅಥವಾ ಸಂದರ್ಭಾನುಸಾರ ಭಾರತದ ವಿಶ್ವವಿದ್ಯಾನಿಲಯ ಅಥವಾ ರಾಜ್ಯ ಸರ್ಕಾರದ ರಸಾಯನ ಶಾಸ್ತ್ರಜ್ಞ ಮತ್ತು ಔಷಧ ತಯಾರಿಕಾ ಡಿಪ್ಲೊಮಾ, ಅಥವಾ ಭಾರತದ ಹೊರಗಡೆಯ ಪ್ರಾಧಿಕಾರವು ಕೊಟ್ಟ ನಿಯಮಿಸಿದ ಅರ್ಹತೆಯನ್ನು ಹೊಂದಿದ್ದರೆ; ಅಥವಾ

(ಬಿ) ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನ ಶಾಸ್ತ್ರದಲ್ಲಿನ ಪದವಿಯನ್ನು ಹೊರತುಪಡಿಸಿ, ಭಾರತದ ವಿಶ್ವವಿದ್ಯಾನಿಲಯದ ಪದವಿಯನ್ನು ಹೊಂದಿದ್ದರೆ ಮತ್ತು ಮೂರು ವರ್ಷಕ್ಕಿಂತ ಕಡಿಮೆ ಇಲ್ಲದ ಒಟ್ಟು ಅವಧಿಯಿಂದ ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಮೆಡಿಕಲ್ ಪ್ರಾಕ್ಟೀಷನರ್‌ರ ಔಷಧಿ ಸೂಚಿಗಳ ಮೇಲೆ ಔಷಧಿಗಳನ್ನು ನಿಯತವಾಗಿ ತಯಾರಿಸಿಕೊಡುವಂಥ ಇತರ ಸ್ಥಳದಲ್ಲಿ ಔಷಧಿಗಳನ್ನು ಮಿಶ್ರಣ ಮಾಡಿಕೊಡುವುದರಲ್ಲಿ ತೊಡಗಿದ್ದರೆ; ಅಥವಾ

(ಸಿ) ಕಾಂಪೌಂಡರುಗಳು ಅಥವಾ ಔಷಧ ತಯಾರಿಸಿಕೊಡುವವರಾಗಿ ರಾಜ್ಯ ಸರ್ಕಾರವು ತಕ್ಕದ್ದೆಂದು ಮನ್ನಣೆ ಮಾಡಿದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ; ಅಥವಾ

(ಡಿ) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕಕ್ಕೆ ಮುಂಚೆ ಐದು ವರ್ಷಗಳಿಗಿಂತ ಕಡಿಮೆ ಇಲ್ಲದ ಒಟ್ಟು ಅವಧಿಗಾಗಿ ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಮೆಡಿಕಲ್ ಪ್ರಾಕ್ಟೀಷನರ್‌ರ ಔಷಧಿ ಸೂಚಿಗಳ ಮೇಲೆ ನಿಯತವಾಗಿ ಔಷಧಗಳನ್ನು ತಯಾರಿಸಿಕೊಡುವಂಥ ಇತರ ಸ್ಥಳದಲ್ಲಿ ಔಷಧಿಗಳನ್ನು ಮಿಶ್ರಣ ಮಾಡಿಕೊಡುವುದರಲ್ಲಿ ತೊಡಗಿದ್ದರೆ,

- ಮೊದಲನೇ ರಿಜಿಸ್ಟರ್‌ನಲ್ಲಿ ಅವನ ಹೆಸರನ್ನು ನಮೂದಿಸಿಕೊಳ್ಳಲು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಹಕ್ಕುಳ್ಳವನಾಗಿರತಕ್ಕುದು.

**32. ತರುವಾಯದ ನೋಂದಣಿಗಾಗಿ ಅರ್ಹತೆಗಳು.**- (1) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದ ತರುವಾಯ ಮತ್ತು ಆ ರಾಜ್ಯದಲ್ಲಿ 11ನೇ ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ಶಿಕ್ಷಣ ವಿನಿಯಮಗಳು ಜಾರಿಗೆ ಬರುವುದಕ್ಕೆ ಮುಂಚೆ ಹದಿನೆಂಟು ವರ್ಷಗಳ ವಯಸ್ಸು ತುಂಬಿರುವ ವ್ಯಕ್ತಿಯು ಆ ರಾಜ್ಯದಲ್ಲಿ ಅವನು ವಾಸಿಸುತ್ತಿದ್ದರೆ ಅಥವಾ ಔಷಧಗಾರಿಕೆಯ ವ್ಯವಹಾರ ವೃತ್ತಿಯನ್ನು ನಡೆಸುತ್ತಿದ್ದರೆ ಮತ್ತು ಅವನು-

(ಎ) ಕೇಂದ್ರ ಪರಿಷತ್ತಿನ ಪೂರ್ವ ಅನುಮೋದನೆಯೊಂದಿಗೆ ನಿಯಮಿಸಿದ ಷರತ್ತುಗಳನ್ನು ಅಥವಾ ಯಾವುದೇ ಷರತ್ತುಗಳನ್ನು ನಿಯಮಿಸಿಲ್ಲದೆ ಇರುವಲ್ಲಿ 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ಮೊದಲನೇ ರಿಜಿಸ್ಟರ್‌ನಲ್ಲಿ ಅವನ ಹೆಸರನ್ನು ನಮೂದಿಸಿಕೊಳ್ಳಲು ವ್ಯಕ್ತಿಯನ್ನು ಹಕ್ಕುಳ್ಳವನನ್ನಾಗಿಸುವ ಷರತ್ತುಗಳನ್ನು ಪೂರೈಸಿದರೆ; ಅಥವಾ

(ಬಿ) ಇನ್ನೊಂದು ರಾಜ್ಯದಲ್ಲಿ ನೋಂದಾಯಿತ ಔಷಧ ತಯಾರಕನಾಗಿದ್ದರೆ; ಅಥವಾ

(ಸಿ) 14ನೇ ಪ್ರಕರಣದ ಮೇರೆಗೆ ಅನುಮೋದಿತವಾದ ಅರ್ಹತೆಯನ್ನು ಹೊಂದಿದ್ದರೆ-

-ನಿಯಮಿಸಿದ ಫೀಜನ್ನು ಸಂದಾಯಮಾಡಿದ ಮೇಲೆ ಆ ರಿಜಿಸ್ಟರ್‌ನಲ್ಲಿ ಅವನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು:

ಪರಂತು, ಯಾವನೇ ವ್ಯಕ್ತಿಯು, ಅವನು ಮೆಟ್ರಿಕ್ಯುಲೇಷನ್ ಪರೀಕ್ಷೆ ಅಥವಾ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಸಮನಾಗಿರುವ ನಿಯಮಿಸಿದ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಹೊರತು ಅವನ ಹೆಸರನ್ನು ಆ ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು (ಎ) ಖಂಡ ಅಥವಾ (ಸಿ) ಖಂಡದ ಮೇರೆಗೆ ಹಕ್ಕುಳ್ಳವನಾಗಿರತಕ್ಕುದಲ್ಲ.

(2) ರಾಜ್ಯದಲ್ಲಿ, 11ನೇ ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ಶಿಕ್ಷಣ ವಿನಿಯಮಗಳು ಜಾರಿಗೆ ಬಂದ ತರುವಾಯ ಒಬ್ಬ ವ್ಯಕ್ತಿಯು, ಅವನಿಗೆ ಹದಿನೆಂಟು ವರ್ಷಗಳ ವಯಸ್ಸು ತುಂಬಿದ್ದರೆ, ಅವನು ರಾಜ್ಯದಲ್ಲಿ ವಾಸವಾಗಿದ್ದರೆ ಅಥವಾ ಔಷಧಗಾರಿಕೆ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿದ್ದರೆ ಮತ್ತು ಅವನು ಅನುಮೋದಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದರೆ ಅಥವಾ 14ನೇ ಪ್ರಕರಣದ ಮೇರೆಗೆ ಅನುಮೋದಿತವಾದ ಅರ್ಹತೆಯನ್ನು ಹೊಂದಿದ್ದರೆ ಅಥವಾ ಇನ್ನೊಂದು ರಾಜ್ಯದಲ್ಲಿ ನೋಂದಾಯಿತ ಔಷಧ ತಯಾರಕನಾಗಿದ್ದರೆ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದು ಮಾಡಿಕೊಳ್ಳಲು, ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಹಕ್ಕುಳ್ಳವನಾಗಿರತಕ್ಕುದು.

**32ಎ. ಕೆಲವು ವ್ಯಕ್ತಿಗಳ ನೋಂದಣಿಗಾಗಿ ಕೆಲವು ಉಪಬಂಧಗಳು.**- (1) 32ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಪರಿಷತ್ತು-

(ಎ) 1948ರ ಮಾರ್ಚ್ 4ನೇ ದಿವಸಕ್ಕೆ ಮುಂಚಿನ ದಿನಾಂಕದಿಂದ ತಮ್ಮ ಜೀವನೋಪಾಯದ ಮುಖ್ಯ ಸಾಧನವಾಗಿ ಔಷಧಗಾರಿಕೆ ವ್ಯವಹಾರ ಅಥವಾ ವೃತ್ತಿಯನ್ನು ನಡೆಸಿಕೊಂಡು ಬರುತ್ತಿರುವ ಮತ್ತು 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ನೋಂದಣಿಯ ಷರತ್ತುಗಳನ್ನು ಪೂರೈಸುವ ಸ್ಥಳಾಂತರಿತ ವ್ಯಕ್ತಿಗಳ ಹೆಸರುಗಳನ್ನು;

(ಬಿ) ಭಾರತದ ಹೊರಗಡೆ ಯಾವುದೇ ದೇಶದಲ್ಲಿ ಔಷಧ ತಯಾರಿಕೆಯ ವ್ಯವಹಾರ ಅಥವಾ ವೃತ್ತಿಯನ್ನು ನಡೆಸಿಕೊಂಡು ಬರುತ್ತಿರುವ ಮತ್ತು 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ನೋಂದಣಿಯ ಷರತ್ತುಗಳನ್ನು ಪೂರೈಸುವ ಭಾರತದ ನಾಗರೀಕರ ಹೆಸರುಗಳನ್ನು;

(ಸಿ) ಯಾವ ಪ್ರದೇಶವು, ತರುವಾಯದಲ್ಲಿ ಭಾರತದ ರಾಜ್ಯ ಕ್ಷೇತ್ರವಾಗಿರುವುದೋ ಆ ಪ್ರದೇಶದಲ್ಲಿ ವಾಸವಾಗಿರುವ ಮತ್ತು 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ನೋಂದಣಿಗಾಗಿನ ಷರತ್ತುಗಳನ್ನು ಪೂರೈಸುವ ವ್ಯಕ್ತಿಗಳ ಹೆಸರುಗಳನ್ನು;

(ಡಿ) ರಾಜ್ಯದಲ್ಲಿ ಔಷಧಗಾರಿಕೆಯ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುವ; ಮತ್ತು

(i) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ನೋಂದಣಿಗಾಗಿ ಅವರು ಅರ್ಜಿಗಳನ್ನು ಮಾಡಿಕೊಂಡಿದ್ದಿದ್ದರೆ ಆ ದಿನಾಂಕದಂದು, 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ನೋಂದಣಿಗಾಗಿನ ಷರತ್ತುಗಳನ್ನು ಪೂರೈಸಬಹುದಾಗಿದ್ದ; ಅಥವಾ

(ii) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಐದು ವರ್ಷಗಳಿಗೆ ಕಡಿಮೆ ಇಲ್ಲದ ಒಟ್ಟು ಅವಧಿಯಿಂದ ಆಸ್ಪತ್ರೆ ಅಥವಾ ಔಷಧಾಲಯ ಅಥವಾ 2ನೇ ಪ್ರಕರಣದ (ಎಫ್) ಖಂಡದ (iii)ನೇ ಉಪಖಂಡದಲ್ಲಿ ಪರಿಭಾಷಿಸಿದಂತೆ ಮೆಡಿಕಲ್ ಪ್ರಾಕ್ಟೀಷನರ್‌ರ ಔಷಧಿ ಸೂಚಿಗಳ ಮೇಲೆ ನಿಯತವಾಗಿ ಔಷಧಿಗಳನ್ನು ತಯಾರಿಸಿಕೊಡುವಂಥ ಇತರ ಸ್ಥಳದಲ್ಲಿ ಔಷಧಿಗಳನ್ನು ಮಿಶ್ರಣ ಮಾಡಿಕೊಡುವುದರಲ್ಲಿ ತೊಡಗಿರುವ

–ವ್ಯಕ್ತಿಗಳ ಹೆಸರುಗಳನ್ನು;

(ಇ) 1956ರ ನವೆಂಬರ್ ಒಂದನೇ ದಿವಸಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ರಾಜ್ಯದ ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು ಅರ್ಹರಾಗಿದ್ದ ಆದರೆ ಯಾರು ತಾವು ವಾಸಿಸುತ್ತಿದ್ದ ಅಥವಾ ಅವರ ಔಷಧಗಾರಿಕೆ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿದ್ದಂಥ ಪ್ರದೇಶವು ಆ ದಿನಾಂಕದಂದು ರಚಿತವಾದಂತೆ ರಾಜ್ಯದ ಭಾಗವಾಗಿರುವ ಕಾರಣ ಮಾತ್ರದಿಂದಲೇ ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆ ಅಥವಾ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಸಮನಾದದ್ದೆಂದು ನಿಯಮಿಸಿದ ಪರೀಕ್ಷೆ ಅಥವಾ ಅನುಮೋದಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿಲ್ಲದೇ ಇರುವ ಅಥವಾ ಅವರು 14ನೇ ಪ್ರಕರಣದ ಮೇರೆಗೆ ಅನುಮೋದಿತ ಅರ್ಹತೆಯನ್ನು ಹೊಂದಿಲ್ಲ ಎಂಬ ಕಾರಣ ಮಾತ್ರದಿಂದ ಆ ತರುವಾಯದ ರಾಜ್ಯಕ್ಕೆ ಮಾತ್ರ ಇರುವ ರಿಜಿಸ್ಟರಿನಲ್ಲಿ ನಮೂದು ಮಾಡಿಕೊಳ್ಳಲು ಅರ್ಹರಾಗಿಲ್ಲದೆ ಇರುವ ವ್ಯಕ್ತಿಗಳ ಹೆಸರುಗಳನ್ನು;

(ಎಫ್)–(i) 1956ರ ನವೆಂಬರ್ ಒಂದನೇ ದಿವಸಕ್ಕೆ ನಿಕಟ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದಂತೆ ಆ ರಾಜ್ಯದ ರಿಜಿಸ್ಟರಿನಲ್ಲಿ ಸೇರ್ಪಡೆಯಾಗಿರುವ; ಮತ್ತು

(ii) ಯಾರು, ತಾವು ವಾಸಿಸುತ್ತಿದ್ದ ಅಥವಾ ಅವರು ಔಷಧಗಾರಿಕೆಯ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿದ್ದಂಥ ಪ್ರದೇಶವು ಆ ದಿನಾಂಕದಂದು ರಚಿತವಾದಂತೆ ರಾಜ್ಯದ ಭಾಗವಾಗಿರುವ ಕಾರಣ ಮಾತ್ರದಿಂದಲೇ ತರುವಾಯದ ರಾಜ್ಯದಲ್ಲಿ ವಾಸಿಸುತ್ತಿರುವರೋ ಅಥವಾ ಅಂಥ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿರುವರೋ

– ಆ ವ್ಯಕ್ತಿಗಳ ಹೆಸರುಗಳನ್ನು;

(ಜಿ) ಯಾರು, ಈ ಅಧ್ಯಾಯವು ಜಾರಿಗೊಳ್ಳುವಂಥ ಪ್ರದೇಶದಲ್ಲಿ ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1959 (1959ರ 24) ಪ್ರಾರಂಭವಾದ ತರುವಾಯ ಔಷಧಗಾರಿಕೆಯ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿರುವರೋ ಮತ್ತು 31ನೇ ಪ್ರಕರಣದಲ್ಲಿ ತಿಳಿಸಿರುವಂತೆ ನೋಂದಣಿಗಾಗಿನ ಷರತ್ತುಗಳನ್ನು ಪೂರೈಸುವರೋ ಆ ವ್ಯಕ್ತಿಗಳ ಹೆಸರುಗಳನ್ನು

– ರಿಜಿಸ್ಟರಿನಲ್ಲಿ ನಮೂದು ಮಾಡಿಕೊಳ್ಳಲು ಸಹ ರಾಜ್ಯ ಪರಿಷತ್ತು ಅನುಮತಿಸಬಹುದು.

(2) (1)ನೇ ಉಪಪ್ರಕರಣದ ಅನುಸಾರ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಇಚ್ಛಿಸುವ ಯಾವನೇ ವ್ಯಕ್ತಿಯು ರಾಜ್ಯ ಪರಿಷತ್ತಿಗೆ ಆ ಬಗ್ಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕುದು ಮತ್ತು ಅಂಥ ಅರ್ಜಿಯೊಂದಿಗೆ ನಿಯಮಿಸಿದ ಫೀಜು ಇರತಕ್ಕುದು.

(3) ಈ ಪ್ರಕರಣದ ಉಪಬಂಧಗಳು, ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1959 (1959ರ 24)ರ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯವರೆಗೆ ಪ್ರವರ್ತನೆಯಲ್ಲಿರತಕ್ಕುದು:

ಪರಂತು, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ (ಎ) ಖಂಡ, (ಬಿ) ಖಂಡ ಅಥವಾ (ಸಿ) ಖಂಡದ ಪ್ರವರ್ತನೆಯ ಅವಧಿಯನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಒಟ್ಟಿನಲ್ಲಿ ಎರಡು ವರ್ಷಗಳನ್ನು ಮೀರದಂಥ ಇನ್ನೂ ಹೆಚ್ಚಿನ ಅವಧಿಯವರೆಗೆ ಅಥವಾ ಅವಧಿಗಳವರೆಗೆ ವಿಸ್ತರಿಸಬಹುದು.

**ವಿವರಣೆ 1:**– (1)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ, " ಸ್ಥಳಾಂತರಿತ ವ್ಯಕ್ತಿ " ಎಂದರೆ ಯಾರು ಭಾರತ ಮತ್ತು ಪಾಕಿಸ್ತಾನಗಳ ಆಧಿಪತ್ಯಗಳನ್ನು ಸ್ಥಾಪಿಸಿದ ಕಾರಣದಿಂದ ಅಥವಾ ಈಗ ಪಾಕಿಸ್ತಾನದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ ಪೌರ ಗಲಭೆಗಳ ಅಥವಾ ಅಂಥ ಗಲಭೆಗಳ ಭಯದ ಕಾರಣದಿಂದ 1947ರ ಮಾರ್ಚ್ ಒಂದನೇ ದಿವಸದಂದು ಅಥವಾ ಆ ತರುವಾಯ ಅಂಥ ಪ್ರದೇಶದಲ್ಲಿನ ಅವನ ವಾಸದ ಸ್ಥಳವನ್ನು ಬಿಟ್ಟಿರುವನೋ ಅಥವಾ ಅಲ್ಲಿಂದ ಸ್ಥಳಾಂತರಿತನಾಗಿರುವನೋ ಅಥವಾ ಯಾರು ಅಂದಿನಿಂದ ಭಾರತದಲ್ಲಿ ವಾಸವಾಗಿರುವನೋ ಆ ಯಾವನೇ ವ್ಯಕ್ತಿ.

**ವಿವರಣೆ 2:**– (1)ನೇ ಉಪಪ್ರಕರಣದ (ಬಿ), (ಸಿ) ಮತ್ತು (ಡಿ) ಖಂಡಗಳ ಉದ್ದೇಶಗಳಿಗಾಗಿ 31ನೇ ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿರುವ ಅವಧಿಯನ್ನು ಅರ್ಜಿಯ ದಿನಾಂಕಕ್ಕೆ ಸಂಬಂಧಿಸಿದಂತೆ ಲೆಕ್ಕ ಹಾಕತಕ್ಕುದು.

**32ಬಿ. ಸ್ಥಳಾಂತರಿತ ವ್ಯಕ್ತಿಗಳ, ಮರಳಿ ಕಳುಹಿಸಿರುವ ಮತ್ತು ಇತರ ವ್ಯಕ್ತಿಗಳ ನೋಂದಣಿಗಾಗಿ ವಿಶೇಷ ಉಪಬಂಧಗಳು.**– (1) 32ನೇ ಪ್ರಕರಣದ ಅಥವಾ 32ಎ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಪರಿಷತ್ತು–

(ಎ) 31ನೇ ಪ್ರಕರಣದ (ಎ) ಖಂಡ ಅಥವಾ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರುವ ಮತ್ತು ಮೊದಲನೇ ರಿಜಿಸ್ಟರನ್ನು ಮುಕ್ತಾಯ ಮಾಡುವ ಮತ್ತು ಶಿಕ್ಷಣ ವಿನಿಯಮಗಳು ಜಾರಿಗೆ ಬಂದ ದಿನಾಂಕದ ನಡುವೆ ನೋಂದಣಿಗೆ ಅರ್ಹರಾಗಿದ್ದ ವ್ಯಕ್ತಿಗಳ ಹೆಸರುಗಳನ್ನು;

(ಬಿ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ 23) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಔಷಧಗಳ ಮಿಶ್ರಣ ಅಥವಾ ಅವುಗಳನ್ನು ತಯಾರಿಸಿಕೊಡುವುದಕ್ಕಾಗಿ 1969ರ ಡಿಸೆಂಬರ್ 31ಕ್ಕೆ ಮುಂಚೆ ' ಅರ್ಹರಾದ ವ್ಯಕ್ತಿ ' ಗಳೆಂದು ಅನುಮೋದಿತವಾಗಿರುವ ವ್ಯಕ್ತಿಗಳ ಹೆಸರುಗಳನ್ನು;

(ಸಿ) ನೋಂದಣಿಯ ಅರ್ಜಿಯ ದಿನಾಂಕಕ್ಕೆ ಮುಂಚಿನ ದಿನಾಂಕದಿಂದ ಐದು ವರ್ಷಗಳಿಗಿಂತ ಕಡಿಮೆ ಇಲ್ಲದ ಒಟ್ಟು ಅವಧಿಯಿಂದ ಭಾರತದ ಹೊರಗಡೆ ಯಾವುದೇ ದೇಶದಲ್ಲಿ ತಮ್ಮ ಜೀವನೋಪಾಯದ ಮುಖ್ಯ ಸಾಧನವಾಗಿ ಔಷಧಗಾರಿಕೆಯ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿದ್ದ ಸ್ಥಳಾಂತರಿತ ವ್ಯಕ್ತಿಗಳು ಅಥವಾ ಮರಳಿ ಕಳುಹಿಸಿರುವವರ ಹೆಸರುಗಳನ್ನು

– ರಿಜಿಸ್ಟರಿನಲ್ಲಿ ನಮೂದು ಮಾಡಿಕೊಳ್ಳಲು ಅನುಮತಿಸಬಹುದು.

**ವಿವರಣೆ:**– ಈ ಉಪಪ್ರಕರಣದಲ್ಲಿ,–

(i) ' ಸ್ಥಳಾಂತರಿತ ವ್ಯಕ್ತಿ ' ಎಂದರೆ, ಯಾರು ಈಗ ಬಾಂಗ್ಲಾದೇಶದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿನ ಪೌರ ಗಲಭೆಗಳು ಅಥವಾ ಅಂಥ ಗಲಭೆಗಳ ಭಯದ ಕಾರಣದಿಂದ 1957ರ ಏಪ್ರಿಲ್ 14ನೇ ದಿವಸದ ತರುವಾಯ, ಆದರೆ 1971ರ ಮಾರ್ಚ್ 25ನೇ ದಿವಸಕ್ಕೆ ಮುಂಚೆ ಅಂಥ ಪ್ರದೇಶದಲ್ಲಿನ ಅವನ ವಾಸಸ್ಥಳವನ್ನು ಬಿಟ್ಟಿರುವನೋ ಅಥವಾ ಅಲ್ಲಿಂದ ಸ್ಥಳಾಂತರಿತನಾಗಿರುವನೋ ಮತ್ತು ಅಂದಿನಿಂದ ಭಾರತದಲ್ಲಿ ವಾಸವಾಗಿರುವನೋ ಆ ಯಾವನೇ ವ್ಯಕ್ತಿ;

(ii) ' ಮರಳಿ ಕಳುಹಿಸಿರುವವನು ' ಎಂದರೆ, ಯಾರು ಈಗ ಬರ್ಮಾ, ಶ್ರೀಲಂಕಾ ಅಥವಾ ಉಗಾಂಡ ಅಥವಾ ಯಾವುದೇ ಇತರ ದೇಶದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿನ ಪೌರ ಗಲಭೆಗಳು ಅಥವಾ ಅಂಥ ಗಲಭೆಗಳ ಭಯದ ಕಾರಣದಿಂದ 1957ರ ಏಪ್ರಿಲ್ 14ನೇ ದಿವಸದ ತರುವಾಯ ಅಂಥ ಪ್ರದೇಶದಲ್ಲಿನ ಅವನ ವಾಸಸ್ಥಳವನ್ನು ಬಿಟ್ಟಿರುವನೋ ಅಥವಾ ಅಲ್ಲಿಂದ ಸ್ಥಳಾಂತರಿತನಾಗಿರುವನೋ ಮತ್ತು ಯಾರು ಅಂದಿನಿಂದ ಭಾರತದಲ್ಲಿ ವಾಸವಾಗಿರುವನೋ, ಭಾರತೀಯ ಮೂಲದ ಆ ಯಾವನೇ ವ್ಯಕ್ತಿ.

(2) (1)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಉಪಬಂಧಗಳು ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1976 (1976ರ 70)ರ ಪ್ರಾರಂಭದಿಂದ ಎರಡು ವರ್ಷಗಳ ಅವಧಿಗೆ ಪ್ರವರ್ತನೆಯಲ್ಲಿರತಕ್ಕುದು.

**33. ನೋಂದಣಿ ಬಗೆಗಿನ ಅರ್ಜಿಗಳ ಪರಿಶೋಧನೆ.**– (1) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದ ತರುವಾಯ ನೋಂದಣಿಗಾಗಿ ಅರ್ಜಿಗಳನ್ನು ರಾಜ್ಯ ಪರಿಷತ್ತಿನ ರಿಜಿಸ್ಟ್ರಾರನಿಗೆ ಕಳುಹಿಸತಕ್ಕುದು ಮತ್ತು ಅವುಗಳೊಂದಿಗೆ ನಿಯಮಿಸಿದ ಫೀಜು ಇರತಕ್ಕುದು.

(2) ಅಂಥ ಅರ್ಜಿಯನ್ನು ಮಾಡಿಕೊಂಡ ಮೇಲೆ, ರಿಜಿಸ್ಟ್ರಾರನು ತತ್ಕಾಲಕ್ಕೆ ಅನ್ವಯವಾಗುವ ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದು ಮಾಡಿಸಿಕೊಳ್ಳಲು ಅರ್ಜಿದಾರನು ಹಕ್ಕುಳ್ಳವನಾಗಿದ್ದಾನೆಂದು ಅಭಿಪ್ರಾಯಪಟ್ಟರೆ, ಅವನು ಆ ಅರ್ಜಿದಾರನ ಹೆಸರನ್ನು ಆ ರಿಜಿಸ್ಟರಿನಲ್ಲಿ ನಮೂದು ಮಾಡತಕ್ಕುದು:

ಪರಂತು, ಯಾರ ಹೆಸರನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ರಾಜ್ಯದ ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ ಆ ಯಾವನೇ ವ್ಯಕ್ತಿಯು ರಾಜ್ಯ ಪರಿಷತ್ತಿನ ಸಭೆಯಲ್ಲಿ ದಾಖಲು ಮಾಡಲಾದ ಅನುಮೋದನೆಯ ಹೊರತು ತನ್ನ ಹೆಸರನ್ನು ಆ ರಿಜಿಸ್ಟರಿನಲ್ಲಿ ನಮೂದು ಮಾಡಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದಲ್ಲ.

(3) ನೋಂದಣಿಗಾಗಿನ ಯಾವ ವ್ಯಕ್ತಿಯ ಅರ್ಜಿಯನ್ನು ರಿಜಿಸ್ಟ್ರಾರನು ತಿರಸ್ಕರಿಸಿರುವನೋ ಆ ಯಾವನೇ ವ್ಯಕ್ತಿಯು ಅಂಥ ತಿರಸ್ಕರಣೆಯ ದಿನಾಂಕದಿಂದ ಮೂರು ತಿಂಗಳುಗಳೊಳಗೆ ರಾಜ್ಯ ಪರಿಷತ್ತಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅದರ ಮೇಲೆ ರಾಜ್ಯ ಪರಿಷತ್ತಿನ ತೀರ್ಮಾನವು ಅಂತಿಮವಾದುದಾಗಿರತಕ್ಕುದು.

(4) ರಿಜಿಸ್ಟ್ರಾರನು ಈ ಪ್ರಕರಣದ ಮೇರೆಗೆ ಹೆಸರನ್ನು ರಿಜಿಸ್ಟರಿನಲ್ಲಿ ನಮೂದು ಮಾಡಿದ ಮೇಲೆ, ನಿಯಮಿಸಿದ ನಮೂನೆಯಲ್ಲಿ ನೋಂದಣಿಯ ಪ್ರಮಾಣಪತ್ರವನ್ನು ಕೊಡತಕ್ಕುದು.

**34. ನವೀಕರಣ ಫೀಜು.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಿಜಿಸ್ಟರಿನಲ್ಲಿ ಮೊದಲ ಸಲ ಯಾವ ವರ್ಷದಲ್ಲಿ ಹೆಸರನ್ನು ನಮೂದಿಸಲಾಗಿದೆಯೋ ಆ ವರ್ಷದ ತರುವಾಯದ ವರ್ಷದ ಡಿಸೆಂಬರ್ 31ನೇ ದಿವಸದ ತರುವಾಯ ಆ ರಿಜಿಸ್ಟರಿನಲ್ಲಿ ಆ ಹೆಸರನ್ನು ಉಳಿಸಿಕೊಳ್ಳುವುದಕ್ಕಾಗಿ ನಿಯಮಿಸಬಹುದಾದಂಥ ನವೀಕರಣ ಫೀಜನ್ನು ರಾಜ್ಯ ಪರಿಷತ್ತಿಗೆ ವಾರ್ಷಿಕವಾಗಿ ಸಂದಾಯ ಮಾಡತಕ್ಕುದೆಂದು ನಿರ್ದೇಶಿಸಬಹುದು ಮತ್ತು ಅಂಥ ನಿರ್ದೇಶನವನ್ನು ಮಾಡಲಾಗಿರುವಲ್ಲಿ ಅಂಥ ನವೀಕರಣ ಫೀಜನ್ನು ಅದು ಸಂಬಂಧಪಡುವಂಥ ವರ್ಷದ ಏಪ್ರಿಲ್ ಮೊದಲನೇ ದಿವಸಕ್ಕೆ ಮುಂಚೆ ಸಂದಾಯಮಾಡಲು ಬಾಕಿಯಾಗಿರತಕ್ಕುದು.

(2) ನವೀಕರಣ ಫೀಜನ್ನು ನಿಗದಿತ ದಿನಾಂಕದೊಳಗೆ ಸಂದಾಯ ಮಾಡದಿರುವಲ್ಲಿ ರಿಜಿಸ್ಟ್ರಾರನು, ಆ ಬಾಕಿದಾರನ ಹೆಸರನ್ನು ರಿಜಿಸ್ಟರ್‌ನಿಂದ ತೆಗೆದುಹಾಕತಕ್ಕುದು:

ಪರಂತು, ಹಾಗೆ ತೆಗೆದುಹಾಕಲಾದ ಹೆಸರನ್ನು ನಿಯಮಿಸಬಹುದಾದಂಥ ಷರತ್ತುಗಳ ಮೇಲೆ ರಿಜಿಸ್ಟರ್‌ನಲ್ಲಿ ಪುನಃ ಸೇರಿಸಬಹುದು.

(3) ನವೀಕರಣ ಫೀಜನ್ನು ಸಂದಾಯಮಾಡಿದ ಮೇಲೆ, ರಿಜಿಸ್ಟ್ರಾರನು, ಅದಕ್ಕಾಗಿ ರಸೀತಿಯನ್ನು ಕೊಡತಕ್ಕುದು ಮತ್ತು ಅಂಥ ರಸೀತಿಯು ನೋಂದಣಿಯ ನವೀಕರಣದ ಬಗ್ಗೆ ರುಜುವಾತಾಗಿರತಕ್ಕುದು.

**35. ಹೆಚ್ಚಿನ ಅರ್ಹತೆಗಳ ನಮೂದು.–** ನೋಂದಾಯಿತ ಔಷಧ ತಯಾರಕನು, ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನ ಶಾಸ್ತ್ರದಲ್ಲಿ ತಾನು ಪಡೆದಿರಬಹುದಾದ ಯಾವುದೇ ಹೆಚ್ಚಿನ ಪದವಿಗಳು ಅಥವಾ ಡಿಪ್ಲೊಮಾಗಳನ್ನು ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕುದು.

**36. ರಿಜಿಸ್ಟರಿನಿಂದ ತೆಗೆದುಹಾಕುವುದು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾರ್ಯನಿರ್ವಾಹಕ ಸಮಿತಿಯು, ನೋಂದಾಯಿತ ಔಷಧ ತಯಾರಕನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಯೋಚಿಸಬಹುದಾದಂಥ ಹೆಚ್ಚಿನ ವಿಚಾರಣೆಯು ಯಾವುದಾದರೂ ಇದ್ದರೆ ಅದನ್ನು ನಡೆಸಿದ ತರುವಾಯ,–

(i) ಅವನ ಹೆಸರನ್ನು ತಪ್ಪಾಗಿ ಅಥವಾ ತಪ್ಪು ನಿರೂಪಣೆಯಿಂದ ಅಥವಾ ಮುಖ್ಯ ಸಂಗತಿಯನ್ನು ಮುಚ್ಚಿಡುವ ಮೂಲಕ ರಿಜಿಸ್ಟರಿನಲ್ಲಿ ನಮೂದಿಸಿಲಾಗಿದೆ ಎಂದು; ಅಥವಾ

(ii) ಅವನು ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಅಥವಾ ಯಾವುದೇ ವೃತ್ತಿಯ ವಿಚಾರದಲ್ಲಿ ಯಾವುದೇ ಹೇಯ ನಡತೆಯ ಬಗ್ಗೆ ತಪ್ಪಿತಸ್ಥನಾಗಿರುವನೆಂದು, ಇದು ಅವನನ್ನು ಆ ರಿಜಿಸ್ಟರಿನಲ್ಲಿಡಲು ಅನರ್ಹಗೊಳಿಸುವುದೆಂದು ಕಾರ್ಯನಿರ್ವಾಹಕ ಸಮಿತಿಯು ಅಭಿಪ್ರಾಯಪಟ್ಟರೆ; ಅಥವಾ

(iii) ಔಷಧಗಾರಿಕೆಯ ಅವನ ವ್ಯವಹಾರದ ಉದ್ದೇಶಗಳಿಗಾಗಿ ಅವನು ನಿಯೋಜಿಸಿದ ಅಥವಾ ಔಷಧಗಾರಿಕೆಯ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವನ ಅಧೀನದಲ್ಲಿ ಕೆಲಸ ಮಾಡಲು ನಿಯೋಜಿತನಾಗಿರುವ ವ್ಯಕ್ತಿಯು, ಯಾವುದೇ ಅಂಥ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವನೆಂದು ಅಥವಾ ಅಂಥ ವ್ಯಕ್ತಿಯು ನೋಂದಾಯಿತ ಔಷಧ ತಯಾರಕನಾಗಿದ್ದರೆ ಅವನ ಹೆಸರನ್ನು (ii)ನೇ ಖಂಡದ ಮೇರೆಗೆ ಆ ರಿಜಿಸ್ಟರಿನಿಂದ ತೆಗೆದುಹಾಕುವುದಕ್ಕೆ ಗುರಿಪಡಿಸಬಹುದಾಗಿದ್ದಂಥ ಯಾವುದೇ ಹೇಯ ನಡತೆಯ ಬಗ್ಗೆ ತಪ್ಪಿತಸ್ಥನಾಗಿದ್ದಾನೆಂದು–

–ಕಾರ್ಯನಿರ್ವಾಹಕ ಸಮಿತಿಗೆ ಮನವರಿಕೆಯಾದರೆ, ಅದು ಅವನ ಹೆಸರನ್ನು ಆ ರಿಜಿಸ್ಟರಿನಿಂದ ತೆಗೆದುಹಾಕತಕ್ಕದೆಂದು ಆದೇಶಿಸಬಹುದು:

ಪರಂತು, (iii)ನೇ ಖಂಡದ ಮೇರೆಗೆ ಯಾವುದೇ ಅಂಥ ಆದೇಶವನ್ನು,–

(ಎ) ಆ ಅಪರಾಧ ಅಥವಾ ಹೇಯ ನಡತೆಯನ್ನು ಆ ನೋಂದಾಯಿತ ಔಷಧ ತಯಾರಕನು ಪ್ರಚೋದಿಸಿದ್ದನು ಅಥವಾ ಅದಕ್ಕೆ ಪರೋಕ್ಷ ಸಮ್ಮತಿ ಕೊಟ್ಟಿದ್ದನೆಂದು; ಅಥವಾ

(ಬಿ) ಆ ಅಪರಾಧವು ಅಥವಾ ಹೇಯ ನಡತೆಯು ಸಂಭವಿಸಿದ ದಿನಾಂಕಕ್ಕೆ ನಿಕಟಪೂರ್ವದ ಹನ್ನೆರಡು ತಿಂಗಳುಗಳ ಅವಧಿಯ ಯಾವುದೇ ಕಾಲದಲ್ಲಿ ಆ ನೋಂದಾಯಿತ ಔಷಧ ತಯಾರಕನು ಅಂಥದೇ ಅಪರಾಧವನ್ನು ಮಾಡಿದ್ದನೆಂದು ಅಥವಾ ಅಂಥದೇ ಹೇಯ ನಡತೆಯ ಬಗ್ಗೆ ತಪ್ಪಿತಸ್ಥನಾಗಿದ್ದನೆಂದು; ಅಥವಾ

(ಸಿ) ಆ ನೋಂದಾಯಿತ ಔಷಧ ತಯಾರಕನು ಔಷಧಗಾರಿಕೆಯ ಅವನ ವ್ಯವಹಾರದ ಉದ್ದೇಶಗಳಿಗೆ ನಿಯೋಜಿಸಿದ ಅಥವಾ ಔಷಧಗಾರಿಕೆಯ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವನ ಅಧೀನದಲ್ಲಿ ಕೆಲಸ ಮಾಡಲು ನಿಯೋಜಿತನಾಗಿರುವ ಯಾವನೇ ವ್ಯಕ್ತಿಯು, ಆ ಅಪರಾಧ ಅಥವಾ ಹೇಯ ನಡತೆಯು ಸಂಭವಿಸಿದ ದಿನಾಂಕಕ್ಕೆ ನಿಕಟಪೂರ್ವದ ಹನ್ನೆರಡು ತಿಂಗಳುಗಳ ಅವಧಿಯ ಯಾವುದೇ ಕಾಲದಲ್ಲಿ ಅಂಥದೇ ಅಪರಾಧವನ್ನು ಮಾಡಿದ್ದಾನೆ ಅಥವಾ ಅಂಥದೇ ಹೇಯ ನಡತೆಯ ಬಗ್ಗೆ ತಪ್ಪಿತಸ್ಥನಾಗಿದ್ದಾನೆಂದು, ಮತ್ತು ಆ ನೋಂದಾಯಿತ ಔಷಧ ತಯಾರಕನಿಗೆ ಅಂಥ ಹಿಂದಿನ ಅಪರಾಧ ಅಥವಾ ಹೇಯ ನಡತೆಯ ಬಗ್ಗೆ ತಿಳುವಳಿಕೆ ಇದ್ದಿತೆಂದು ಅಥವಾ ಸೂಕ್ತವಾಗಿ ಇರಬೇಕಾಗಿದ್ದಿತೆಂದು; ಅಥವಾ

(ಡಿ) ಆ ಅಪರಾಧ ಅಥವಾ ಹೇಯ ನಡತೆಯು ಯಾವುದೇ ಅವಧಿಯವರೆಗೆ ಮುಂದುವರೆದಿರುವಲ್ಲಿ, ಆ ನೋಂದಾಯಿತ ಔಷಧ ತಯಾರಕನಿಗೆ ಮುಂದುವರಿಯುತ್ತಿರುವ ಅಪರಾಧ ಅಥವಾ ಹೇಯ ನಡತೆಯ ಬಗ್ಗೆ ತಿಳುವಳಿಕೆ ಇದ್ದಿತೆಂದು ಅಥವಾ ಯುಕ್ತವಾಗಿ ಇರಬೇಕಾಗಿದ್ದಿತೆಂದು; ಅಥವಾ

(ಇ) ಆ ಅಪರಾಧವು ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ 23)ರ ಮೇರೆಗಿನ ಅಪರಾಧವಾಗಿರುವಲ್ಲಿ, ಆ ನೋಂದಾಯಿತ ಔಷಧ ತಯಾರಕನು ಮತ್ತು ಅವನು ನಿಯೋಜಿಸಿರುವ ವ್ಯಕ್ತಿಗಳು ಅಥವಾ ಅವನ ನಿಯಂತ್ರಣದಲ್ಲಿರುವ ವ್ಯಕ್ತಿಗಳು ಅವನ ವ್ಯವಹಾರದ ಸ್ಥಳದಲ್ಲಿ

ಆ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಜಾರಿಗೊಳಿಸುವಲ್ಲಿ ಯುಕ್ತ ಶ್ರದ್ಧೆಯನ್ನು ವಹಿಸಿರಲಿಲ್ಲವೆಂದು

– ಕಾರ್ಯನಿರ್ವಾಹಕ ಸಮಿತಿಯು ಮನವರಿಕೆ ಮಾಡಿಕೊಂಡ ಹೊರತು, ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ಆದೇಶದ ಮೂಲಕ, ಯಾರ ಹೆಸರನ್ನು ರಿಜಿಸ್ಟರ್‌ನಿಂದ ತೆಗೆದುಹಾಕಲು ಆದೇಶಿಸಲಾಗಿದೆಯೋ ಆ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ರಾಜ್ಯದಲ್ಲಿ ನೋಂದಣಿಗಾಗಿ ಖಾಯಂ ಆಗಿಯೇ ಆಗಲಿ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಆಗಲಿ ಅನರ್ಹನಾಗಿರತಕ್ಕುದೆಂದು ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶವು ರಾಜ್ಯಪರಿಷತ್ತು ಸ್ಥಿರೀಕರಿಸುವುದಕ್ಕೊಳಪಟ್ಟಿರ ತಕ್ಕುದು ಮತ್ತು ಅಂಥ ಸ್ಥಿರೀಕರಣದ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾಗುವವರೆಗೆ ಜಾರಿಗೆ ಬರತಕ್ಕುದಲ್ಲ.

(4) ರಾಜ್ಯ ಪರಿಷತ್ತು ಸ್ಥಿರೀಕರಿಸಿದಂಥ (1)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ವ್ಯಕ್ತಿಯು ಅಂಥ ಸ್ಥಿರೀಕರಣವನ್ನು ಅವನಿಗೆ ತಿಳಿಸಿದಂದಿನಿಂದ ಮೂವತ್ತು ದಿವಸಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಬಗ್ಗೆ ರಾಜ್ಯ ಸರ್ಕಾರದ ಆದೇಶವು ಅಂತಿಮವಾಗಿರತಕ್ಕುದು.

(5) ಈ ಪ್ರಕರಣದ ಮೇರೆಗೆ ಅಥವಾ 34ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟರಿನಿಂದ ಯಾರ ಹೆಸರನ್ನು ತೆಗೆದುಹಾಕಲಾಗಿದೆಯೋ ಆ ವ್ಯಕ್ತಿಯು ತಕ್ಷಣ ಅವನ ನೋಂದಣಿ ಪ್ರಮಾಣಪತ್ರವನ್ನು ರಿಜಿಸ್ಟ್ರಾರನಿಗೆ ಒಪ್ಪಿಸತಕ್ಕುದು, ಮತ್ತು ಹಾಗೆ ತೆಗೆದುಹಾಕಲಾದ ಹೆಸರನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

**37. ರಿಜಿಸ್ಟರಿಗೆ ಪುನಃ ಸೇರಿಸುವುದು**:– ರಾಜ್ಯ ಪರಿಷತ್ತು, ಯಾವುದೇ ಕಾಲದಲ್ಲಿ ಅದಕ್ಕೆ ಸಾಕಷ್ಟೆಂದು ಕಂಡು ಬರುವ ಕಾರಣಗಳಿಗಾಗಿ, ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟರಿನಿಂದ ತೆಗೆದುಹಾಕಿದ ವ್ಯಕ್ತಿಯ ಹೆಸರನ್ನು ಅದಕ್ಕೆ ಪುನಃ ಸೇರಿಸತಕ್ಕುದೆಂದು ಆದೇಶಿಸಬಹುದು:

ಪರಂತು, ಅಂಥ ತೆಗೆದುಹಾಕಿರುವುದರ ವಿರುದ್ಧ ಮಾಡಿಕೊಂಡ ಅಪೀಲನ್ನು ರಾಜ್ಯ ಸರ್ಕಾರವು ತಿರಸ್ಕರಿಸಿರುವಲ್ಲಿ ಈ ಪ್ರಕರಣದ ಮೇರೆಗಿನ ಆದೇಶವು ರಾಜ್ಯ ಸರ್ಕಾರವು ಅದನ್ನು ಸ್ಥಿರೀಕರಿಸುವವರೆಗೆ ಜಾರಿಗೆ ಬರತಕ್ಕುದಲ್ಲ.

**38. ಇತರ ಅಧಿಕಾರ ವ್ಯಾಪ್ತಿಯ ಪ್ರತಿಷೇಧ**.– ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಲು ನಿರಾಕರಿಸುವ ಅಥವಾ ಆ ರಿಜಿಸ್ಟರಿನಿಂದ ಹೆಸರನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**39. ನೋಂದಣಿ ಪ್ರಮಾಣಪತ್ರಗಳ ದ್ವಿಪ್ರತಿಯನ್ನು ಕೊಡುವುದು**.– ನೋಂದಣಿಯ ಪ್ರಮಾಣಪತ್ರವು ಕಳೆದು ಹೋಗಿದೆ ಅಥವಾ ನಾಶವಾಗಿದೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ತೋರಿಸಿರುವಲ್ಲಿ ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ, ರಿಜಿಸ್ಟ್ರಾರನು ನಿಯಮಿಸಿದ ನಮೂನೆಯಲ್ಲಿ ದ್ವಿಪ್ರತಿ ಪ್ರಮಾಣಪತ್ರವನ್ನು ಕೊಡಬಹುದು.

**40. ರಿಜಿಸ್ಟರಿನ ಮುದ್ರಣ ಮತ್ತು ಅದರಲ್ಲಿನ ನಮೂದುಗಳ ಸಾಕ್ಷ್ಯದ ಮಹತ್ವ**.– (1) ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1959 (1959ರ 24)ರ ಪ್ರಾರಂಭದ ನಂತರ ಏಪ್ರಿಲ್ ಒಂದನೇ ದಿವಸದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗ, ರಿಜಿಸ್ಟ್ರಾರನು ಸದರಿ ದಿನಾಂಕದಂದು, ಅದು ಇದ್ದ ಹಾಗೆ, ಆ ರಿಜಿಸ್ಟರಿನ ಪ್ರತಿಗಳನ್ನು ಮುದ್ರಿಸುವಂತೆ ಮಾಡತಕ್ಕದು.

(2) ರಿಜಿಸ್ಟ್ರಾರನು, ಆನಂತರ, ಪ್ರತಿವರ್ಷದ ಏಪ್ರಿಲ್ ಒಂದನೇ ದಿವಸದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗ ಸದರಿ ರಿಜಿಸ್ಟರಿಗೆ ಮಾಡಿದ ಎಲ್ಲಾ ಸೇರ್ಪಡೆಗಳು ಮತ್ತು ಅದರಲ್ಲಿನ ಇತರ ತಿದ್ದುಪಡಿಗಳನ್ನು ತೋರಿಸಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ರಿಜಿಸ್ಟರಿನ ಬಗ್ಗೆ ವಾರ್ಷಿಕ ಪುರವಣಿಯ ಪ್ರತಿಗಳನ್ನು ಮುದ್ರಿಸುವಂತೆ ಮಾಡತಕ್ಕುದು.

(3) (ಎ) ರಾಜ್ಯಪರಿಷತ್ತಿಗೆ ಸಾಮಾನ್ಯ ಚುನಾವಣೆಗಳನ್ನು ನಡೆಸುವುದಕ್ಕೆ ಮೂರು ತಿಂಗಳುಗಳ ಮುಂಚೆ, ರಿಜಿಸ್ಟರನ್ನು ಆ ತಹಲ್‌ವರೆಗೆ ಇಟ್ಟಿರತಕ್ಕುದು ಮತ್ತು ಈ ರಿಜಿಸ್ಟರಿನ ಪ್ರತಿಗಳನ್ನು ಮುದ್ರಿಸತಕ್ಕುದು.

(ಬಿ) (2)ನೇ ಉಪಪ್ರಕರಣದ ಉಪಬಂಧಗಳು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಿಜಿಸ್ಟರಿಗೆ ಅವು ಅನ್ವಯವಾಗುವ ಹಾಗೆಯೇ ಮುದ್ರಿಸಿದ ರಿಜಿಸ್ಟರಿಗೂ ಅನ್ವಯವಾಗತಕ್ಕುದು.

(4) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಗಳನ್ನು, ಅವುಗಳಿಗಾಗಿ ಅರ್ಜಿಯನ್ನು ಮಾಡಿಕೊಳ್ಳುವ ವ್ಯಕ್ತಿಗಳಿಗೆ, ಅವರು ನಿಯಮಿಸಿದ ವೆಚ್ಚವನ್ನು ಅವರು ಸಂದಾಯ ಮಾಡಿದ ಮೇಲೆ, ಲಭ್ಯವಾಗುವಂತೆ ಮಾಡತಕ್ಕುದು ಮತ್ತು ಅವು ಸಂದರ್ಭಾನುಸಾರ ರಿಜಿಸ್ಟರಿನಲ್ಲಿ ಅಥವಾ ವಾರ್ಷಿಕ ಪುರವಣಿಯಲ್ಲಿ ಉಲ್ಲೇಖಿಸಿದ ದಿನಾಂಕದಂದು, ಯಾರ ಹೆಸರುಗಳನ್ನು ಅದರಲ್ಲಿ ನಮೂದಿಸಲಾಗಿದೆಯೋ ಆ ವ್ಯಕ್ತಿಗಳು ನೋಂದಾಯಿತ ಔಷಧ ತಯಾರಕರಾಗಿದ್ದಾರೆಂಬ ಬಗ್ಗೆ ಸಾಕ್ಷ್ಯವಾಗಿರತಕ್ಕುದು.

## ಅಧ್ಯಾಯ - V

### ಸಂಕೀರ್ಣ

**41. ನೋಂದಾಯಿಸಲಾಗಿದೆ ಎಂದು ಸುಳ್ಳಾಗಿ ಕ್ಲೇಮು ಮಾಡುವುದಕ್ಕಾಗಿ ದಂಡನೆ.-** (1) ಯಾರ ಹೆಸರನ್ನು ರಾಜ್ಯದ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನಮೂದು ಮಾಡಿಲ್ಲವೋ ಆ ಯಾವನೇ ವ್ಯಕ್ತಿಯು ಅದನ್ನು ಹಾಗೆ ನಮೂದಿಸಲಾಗಿದೆ ಎಂದು ಸುಳ್ಳಾಗಿ ನಟನೆ ಮಾಡಿದರೆ ಅಥವಾ ಅವನ ಹೆಸರು ಅಥವಾ ಅಂಕಿತನಾಮಕ್ಕೆ ಸಂಬಂಧಿಸಿದಂತೆ ಅವನ ಹೆಸರನ್ನು ಹಾಗೆ ನಮೂದಿಸಲಾಗಿದೆ ಎಂದು ಸೂಚಿಸಲು ಯುಕ್ತವಾಗಿ ಉದ್ದೇಶಿಸಲಾದ ಯಾವುದೇ ಪದಗಳು ಅಥವಾ ಅಕ್ಷರಗಳನ್ನು ಬಳಸಿದರೆ ಅವನು ಮೊದಲ ಬಾರಿಗೆ ಅಪರಾಧಿ ಎಂದು ನಿರ್ಣೀತನಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದಲ್ಲಿ ಅಪರಾಧಿ ಎಂದು ನಿರ್ಣೀತನಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು:

ಪರಂತು, ಆಪಾದಿತನ ಹೆಸರನ್ನು ಇನ್ನೊಂದು ರಾಜ್ಯದ ರಿಜಿಸ್ಟರಿನಲ್ಲಿ ನಮೂದು ಮಾಡಲಾಗಿದೆ ಎಂದು ಮತ್ತು ಈ ಪ್ರಕರಣದ ಮೇರೆಗಿನ ಆರೋಪಿತ ಅಪರಾಧದ ಕಾಲದಲ್ಲಿ ರಾಜ್ಯದಲ್ಲಿ ನೋಂದಣಿಗಾಗಿ ಅರ್ಜಿಯನ್ನು ಮಾಡಿಕೊಳ್ಳಲಾಗಿತ್ತು ಎಂದು ತೋರಿಸುವುದು ಪ್ರತಿರಕ್ಷೆಯಾಗಿರತಕ್ಕುದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ-

(ಎ) ಹಿಂದೆ ಹೇಳಿದಂಥ ನಟನೆ ಅಥವಾ ಬಳಕೆಯಿಂದ ಯಾವನೇ ವ್ಯಕ್ತಿಯು ವಂಚಿತನಾಗಿರಲಿ ಅಥವಾ ವಂಚಿತನಾಗದಿರಲಿ ಅದು ಅಪ್ರಧಾನವಾಗಿರತಕ್ಕುದು;

(ಬಿ) "ಔಷಧ ತಯಾರಕ", "ರಸಾಯನ ಶಾಸ್ತ್ರಜ್ಞ", "ಔಷಧ ವ್ಯಾಪಾರಿ", "ಔಷಧ ನಿರ್ಮಾಣ ವಿಜ್ಞಾನಿ", "ಔಷಧ ತಯಾರಿಸಿ ಕೊಡುವವನು", "ಔಷಧ ತಯಾರಿಸಿ ಕೊಡುವ ರಸಾಯನ ಶಾಸ್ತ್ರಜ್ಞ" ಎಂಬ ವಿವರಣೆಯ ಅಥವಾ ಅಂಥ ಪದಗಳ ಯಾವುದೇ ಸಂಯೋಜನೆಯ ಅಥವಾ ಯಾವುದೇ ಇತರ ಪದದೊಂದಿಗೆ ಯಾವುದೇ ಅಂಥ ಪದದ ಬಳಕೆಯನ್ನು, ಅಂಥ ವಿವರಣೆಯನ್ನು ಬಳಸುವ ವ್ಯಕ್ತಿಯೇ,

ಯಾರ ಹೆಸರು ತತ್ಕಾಲದಲ್ಲಿ ಆ ರಾಜ್ಯದ ರಿಜಿಸ್ಟರಿನಲ್ಲಿ ನಮೂದಾಗಿದೆಯೋ ಆ ಹೆಸರಿನ ವ್ಯಕ್ತಿ ಎಂದು ಸೂಚಿಸಲು ಯುಕ್ತವಾಗಿ ಯೋಜಿಸಿದ್ದೆಂದು ಭಾವಿಸತಕ್ಕುದು;

(ಸಿ) ವ್ಯಕ್ತಿಯ ಹೆಸರು ರಾಜ್ಯದ ರಿಜಿಸ್ಟರಿನಲ್ಲಿ ತತ್ಕಾಲದಲ್ಲಿ ನಮೂದಾಗಿದೆ ಎಂದು ರುಜುವಾತುಪಡಿಸುವ ಹೊಣೆಗಾರಿಕೆಯು, ಹಾಗೆಂದು ಪ್ರತಿಪಾದಿಸುವ ವ್ಯಕ್ತಿಯ ಮೇಲೆ ಇರತಕ್ಕುದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞೇಯತೆಯನ್ನು ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯ ಆದೇಶದ ಮೂಲಕ ಅಥವಾ ಆ ರಾಜ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಆದೇಶದ ಮೂಲಕ ಮಾಡಿದ ದೂರಿನ ಮೇಲೆ ಹೊರತು ತೆಗೆದುಕೊಳ್ಳತಕ್ಕುದಲ್ಲ.

**42. ನೋಂದಾಯಿಸಿಕೊಂಡಿಲ್ಲದ ವ್ಯಕ್ತಿಗಳು ಔಷಧವನ್ನು ತಯಾರಿಸಿಕೊಡುವುದು:-** (1) ರಾಜ್ಯ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಅಥವಾ ಆ ತರುವಾಯ, ನೋಂದಾಯಿತ ಔಷಧ ತಯಾರಕನನ್ನು ಹೊರತುಪಡಿಸಿ ಯಾವನೇ ಇತರ ವ್ಯಕ್ತಿಯು ಮೆಡಿಕಲ್ ಪ್ರಾಕ್ಟೀಷನರ್‌ನ ಔಷಧ ಸೂಚಿಯ ಮೇಲೆ ಯಾವುದೇ ಔಷಧವನ್ನು ಮಿಶ್ರಣ ಮಾಡತಕ್ಕುದಲ್ಲ, ತಯಾರಿಸತಕ್ಕುದಲ್ಲ, ಸೇರಿಸತಕ್ಕುದಲ್ಲ ಅಥವಾ ತಯಾರಿಸಿಕೊಡತಕ್ಕುದಲ್ಲ:

ಪರಂತು, ಈ ಉಪ ಪ್ರಕರಣವು, ತನ್ನ ರೋಗಿಗಳಿಗಾಗಿ ಅಥವಾ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿಯನ್ನು ಪಡೆದು ಇನ್ನೊಬ್ಬ ಮೆಡಿಕಲ್ ಪ್ರಾಕ್ಟೀಷನರ್‌ನ ರೋಗಿಗಳಿಗಾಗಿ ಮೆಡಿಕಲ್ ಪ್ರಾಕ್ಟೀಷನರ್‌ನು ಔಷಧವನ್ನು ತಯಾರಿಸಿಕೊಡುವುದಕ್ಕೆ ಅನ್ವಯವಾಗತಕ್ಕುದಲ್ಲ:

ಮತ್ತೂ ಪರಂತು, ಯಾವುದೇ ಅಂಥ ದಿನಾಂಕವನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಿಲ್ಲದೆ ಇರುವಲ್ಲಿ, ಈ ಪ್ರಕರಣವು ಆ ರಾಜ್ಯದಲ್ಲಿ ಔಷಧಗಾರಿಕೆ (ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭದಿಂದ ಎಂಟು ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ ಜಾರಿಗೆ ಬರತಕ್ಕುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞೇಯತೆಯನ್ನು, ರಾಜ್ಯಸರ್ಕಾರ ಅಥವಾ ಈ ಬಗ್ಗೆ ರಾಜ್ಯಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಮಾಡಿದ ಅಥವಾ ರಾಜ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಆದೇಶದ ಮೂಲಕ ಮಾಡಿದ ದೂರಿನ ಮೇಲೆ ಹೊರತು ತೆಗೆದುಕೊಳ್ಳತಕ್ಕುದಲ್ಲ.

**43. ನೋಂದಣಿ ಪ್ರಮಾಣಪತ್ರವನ್ನು ಒಪ್ಪಿಸಲು ತಪ್ಪುವುದು:-** (1) ಯಾರ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ ಆ ಯಾವನೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ ಅವನ ನೋಂದಣಿ ಪ್ರಮಾಣಪತ್ರವನ್ನು ತಕ್ಷಣ ಒಪ್ಪಿಸಲು ತಪ್ಪಿದರೆ, ಅವನು ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(2) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞೇಯತೆಯನ್ನು ಕಾರ್ಯನಿರ್ವಾಹಕ ಸಮಿತಿಯ ಆದೇಶದ ಮೂಲಕ ಮಾಡಿಕೊಂಡ ದೂರಿನಮೇಲೆ ಹೊರತು ತೆಗೆದುಕೊಳ್ಳತಕ್ಕುದಲ್ಲ.

**44. ಕೇಂದ್ರ ಪರಿಷತ್ತಿಗೆ ಫೀಜಿನ ಭಾಗದ ಸಂದಾಯ:-** ರಾಜ್ಯ ಪರಿಷತ್ತು ಪ್ರತಿವರ್ಷದಲ್ಲಿ ಜೂನ್ ತಿಂಗಳು ಕೊನೆಗೊಳ್ಳುವುದಕ್ಕೆ ಮುಂಚೆ ಆ ವರ್ಷದ ಮಾರ್ಚ್ 31ನೇ ದಿವಸದಂದು ಕೊನೆಗೊಳ್ಳುವ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಈ ಅಧಿನಿಯಮದ ಮೇರೆಗೆ ರಾಜ್ಯ ಪರಿಷತ್ತು ವಸೂಲು ಮಾಡಿದ

ಒಟ್ಟು ಫೀಜುಗಳ ನಾಲ್ಕನೇ ಒಂದು ಭಾಗಕ್ಕೆ ಸಮನಾದ ಮೊತ್ತವನ್ನು ಕೇಂದ್ರ ಪರಿಷತ್ತಿಗೆ ಸಂದಾಯ ಮಾಡತಕ್ಕುದು.

**45. ವಿಚಾರಣಾ ಆಯೋಗದ ನೇಮಕಾತಿ:–** (1) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಕೇಂದ್ರ ಪರಿಷತ್ತು ಪಾಲಿಸುತ್ತಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದಾಗಲೆಲ್ಲ, ಕೇಂದ್ರ ಸರ್ಕಾರವು ಮೂವರು ವ್ಯಕ್ತಿಗಳನ್ನೊಳಗೊಂಡ ವಿಚಾರಣಾ ಆಯೋಗವನ್ನು ನೇಮಕ ಮಾಡಬಹುದು. ಅವರ ಪೈಕಿ ಇಬ್ಬರನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು; ಇವರಲ್ಲಿ ಒಬ್ಬನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರತಕ್ಕದು ಮತ್ತು ಒಬ್ಬನನ್ನು ಪರಿಷತ್ತು ನೇಮಕ ಮಾಡತಕ್ಕುದು ಮತ್ತು ಅದಕ್ಕೆ ಯಾವ ವಿಷಯಗಳ ಬಗ್ಗೆ ವಿಚಾರಣೆಯನ್ನು ಮಾಡಬೇಕಾಗಿದೆಯೋ ಆ ವಿಷಯಗಳನ್ನು ಒಪ್ಪಿಸತಕ್ಕುದು.

(2) ಆಯೋಗವು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ಮಾಡಲು ಅದು ಮುಂದುವರಿಯತಕ್ಕುದು ಮತ್ತು ಆಯೋಗವು ಶಿಫಾರಸ್ಸು ಮಾಡಲು ಇಚ್ಛಿಸಬಹುದಾದಂಥ ಪರಿಹಾರೋಪಾಯಗಳು ಯಾವುವಾದರೂ ಇದ್ದರೆ ಅವುಗಳೊಂದಿಗೆ ಅದಕ್ಕೆ ಒಪ್ಪಿಸಿದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಮಾಡತಕ್ಕುದು.

(3) ಕೇಂದ್ರ ಸರ್ಕಾರವು ಆ ವರದಿಯನ್ನು ಅಂಗೀಕರಿಸಬಹುದು ಅಥವಾ ಮಾರ್ಪಾಟು ಮಾಡುವುದಕ್ಕಾಗಿ ಅಥವಾ ಪುನರ್ ಪರ್ಯಾಲೋಚನೆಗಾಗಿ ಆಯೋಗಕ್ಕೆ ಅದನ್ನು ವಾಪಸು ಕಳುಹಿಸಬಹುದು.

(4) ಆ ವರದಿಯನ್ನು ಅಂತಿಮವಾಗಿ ಅಂಗೀಕರಿಸಿದ ತರುವಾಯ, ಕೇಂದ್ರ ಸರ್ಕಾರವು, ಹಾಗೆ ಶಿಫಾರಸ್ಸು ಮಾಡಿದ ಪರಿಹಾರೋಪಾಯಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅಂಗೀಕರಿಸಲು ಕೇಂದ್ರ ಪರಿಷತ್ತಿಗೆ ಆದೇಶಿಸಬಹುದು ಮತ್ತು ಪರಿಷತ್ತು ಹಾಗೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಪಾಲಿಸಲು ತಪ್ಪಿದರೆ, ಕೇಂದ್ರ ಸರ್ಕಾರವು ಆ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಅವಶ್ಯವಾಗಬಹುದಾದಂಥ ಆದೇಶವನ್ನು ಮಾಡಬಹುದು ಅಥವಾ ಅಂಥ ಕ್ರಮವನ್ನು ಕೈಗೊಳ್ಳಬಹುದು.

(5) ರಾಜ್ಯ ಪರಿಷತ್ತು ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸುತ್ತಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಾಗಲೆಲ್ಲ ರಾಜ್ಯ ಸರ್ಕಾರವು, ಅದೇ ರೀತಿ ಅಂಥದೇ ವಿಚಾರಣಾ ಆಯೋಗವನ್ನು ನೇಮಕ ಮಾಡಬಹುದು ಮತ್ತು (3) ಮತ್ತು (4)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂಥ ಆದೇಶವನ್ನು ಮಾಡಬಹುದು ಮತ್ತು ಅಂಥ ಕ್ರಮವನ್ನು ಕೈಗೊಳ್ಳಬಹುದು.

**46. ನಿಯಮ ರಚನಾಧಿಕಾರ:–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ III, IV ಮತ್ತು Vನೇ ಅಧ್ಯಾಯಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ರಾಜ್ಯಪರಿಷತ್ತಿನ ಸ್ವತ್ತಿನ ವ್ಯವಸ್ಥಾಪನೆ ಮತ್ತು ಅದರ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಪರಿಶೋಧನೆ;

(ಬಿ) IIIನೇ ಅಧ್ಯಾಯದ ಮೇರೆಗೆ ಚುನಾವಣೆಗಳನ್ನು ನಡೆಸತಕ್ಕಂಥ ರೀತಿ;

(ಸಿ) ರಾಜ್ಯ ಪರಿಷತ್ತಿನ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು; ಅಂಥ ಸಭೆಗಳನ್ನು ನಡೆಸತಕ್ಕಂಥ ಕಾಲಗಳು ಮತ್ತು ಸ್ಥಳಗಳು, ಅದರಲ್ಲಿ ಕಾರ್ಯಕಲಾಪವನ್ನು ನಡೆಸುವುದು ಮತ್ತು ಕೋರಂ ಆಗಲು ಅವಶ್ಯವಾದ ಸದಸ್ಯರ ಸಂಖ್ಯೆ;

(ಡಿ) ರಾಜ್ಯ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಇ) ಕಾರ್ಯನಿರ್ವಾಹಕ ಸಮಿತಿಯ ರಚನೆ ಮತ್ತು ಪ್ರಕಾರ್ಯಗಳು, ಅದರ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳನ್ನು ನಡೆಸತಕ್ಕಂಥ ಕಾಲಗಳು ಮತ್ತು ಸ್ಥಳಗಳು ಮತ್ತು ಕೋರಂ ಆಗಲು ಅವಶ್ಯವಾದ ಸದಸ್ಯರ ಸಂಖ್ಯೆ;

(ಎಫ್) ಖಜಾಂಚಿಯು ಕೊಡಬೇಕಾದ ಭದ್ರತೆಯ ಮೊಬಲಗು ಮತ್ತು ಅದರ ಸ್ವರೂಪವನ್ನು ಒಳಗೊಂಡು ರಾಜ್ಯ ಪರಿಷತ್ತಿನ ರಿಜಿಸ್ಟ್ರಾರ್ ಮತ್ತು ಇತರ ಅಧಿಕಾರಿಗಳು ಮತ್ತು ನೌಕರರ ಅರ್ಹತೆಗಳು, ಪದಾವಧಿ ಮತ್ತು ಅಧಿಕಾರಗಳು ಮತ್ತು ಕರ್ತವ್ಯಗಳು;

(ಎಫ್ಎಫ್) ಪರಿಶೀಲಕನ ಅರ್ಹತೆಗಳು, ಅಧಿಕಾರಗಳು ಮತ್ತು ಕರ್ತವ್ಯಗಳು;

(ಜಿ) IVನೇ ಅಧ್ಯಾಯದ ಮೇರೆಗೆ ನೋಂದಣಿಗಾಗಿನ ಅರ್ಜಿಗಳಲ್ಲಿ ತಿಳಿಸಬೇಕಾದ ವಿವರಗಳು ಮತ್ತು ಅರ್ಹತೆಗಳ ಬಗ್ಗೆ ಕೊಡಬೇಕಾದ ರುಜುವಾತು;

(ಹೆಚ್) 32ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿನ ಷರತ್ತುಗಳು;

(ಐ) IVನೇ ಅಧ್ಯಾಯದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ರಿಜಿಸ್ಟರಿನ ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿನ ವೆಚ್ಚ;

(ಜೆ) ನೋಂದಣಿಯ ಪ್ರಮಾಣಪತ್ರಗಳ ನಮೂನೆ;

(ಕೆ) ರಿಜಿಸ್ಟರಿನ ನಿರ್ವಹಣೆ;

(ಕೆಕೆ) ಮೆಡಿಕಲ್ ಪ್ರಾಕ್ಟೀಷನರು, ಸಾರ್ವಜನಿಕರು ಮತ್ತು ಔಷಧಗಾರಿಕೆಯ ವೃತ್ತಿಗೆ ಸಂಬಂಧಪಟ್ಟಂತೆ ಔಷಧ ತಯಾರಕರ ನಡತೆ ಮತ್ತು ಅವರ ಕರ್ತವ್ಯಗಳು;

(ಎಲ್) 45ನೇ ಪ್ರಕರಣದ (1), (2), (3) ಮತ್ತು (4)ನೇ ಉಪಪ್ರಕರಣಗಳನ್ನು ಹೊರತುಪಡಿಸಿ III, IV ಮತ್ತು Vನೇ ಅಧ್ಯಾಯಗಳ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ

– ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕುದು.

* * * * * *